ಕೃಷಿ ವಿಶ್ವವಿದ್ಯಾಲಯ, ಧಾರವಾಡ
ಕೃಷಿ ಮತ್ತು ಇತರೆ ಅಭಿವೃದ್ಧಿ ಇಲಾಖೆಗಳು
ಕರ್ನಾಟಕ ಸರಕಾರ, ಬೆಂಗಳೂರು

# ಕೃಷಿ ತಂತ್ರಜ್ಞಾನ ನಿರ್ವಹಣಾ ಸಂಸ್ಥೆಯಡಿ (ATMA) ರಾಜ್ಯ ವಿಸ್ತರಣಾ ಕಾರ್ಯಕ್ರಮಗಳನ್ನು ಬಲಪಡಿಸಲು ವಿಸ್ತರಣಾ ಪದ್ಧತಿಯಲ್ಲಿ ಸುಧಾರಣೆ ಯೋಜನೆ

## ಮಾರ್ಪಡಿಸಿದ ಮಾರ್ಗ ಸೂಚಿ – 2010

**ಕೃಷಿ ಹಾಗೂ ಸಹಕಾರ ಇಲಾಖೆ**
**ಕೃಷಿ ಮಂತ್ರಾಲಯ, ಭಾರತ ಸರಕಾರ**

ಆಗಸ್ಟ್ 2011

# ಪರಿವಿಡಿ


| ಅ. ನಂ. | ವಿಷಯ | ಪುಟ ಸಂಖ್ಯೆ |
|---|---|---|
| | ಸಂಕ್ಷಿಪ್ತ ಪದಗಳು | 1-3 |
| | ಸಾರಾಂಶ | 4-5 |
| **ಅಧ್ಯಾಯ I. ಹಿನ್ನೆಲೆ ಮತ್ತು ಕಾರ್ಯನೀತಿ** | | 6-15 |
| 1.1 | ಹಿನ್ನೆಲೆ | 7 |
| 1.2 | ಯೋಜನೆಯ ಸವಿಸ್ತಾರವಾದ ಲಕ್ಷಣಗಳು | 8 |
| 1.3 | ಉದ್ದೇಶಗಳು | 9 |
| 1.4 | ಕಾರ್ಯನೀತಿ | 9 |
| **ಅಧ್ಯಾಯ II. ತಜ್ಞರ ಮತ್ತು ಕಾರ್ಯಕರ್ತರ ಬಲವರ್ಧನೆ** | | 16-21 |
| 2.1 | ರಾಜ್ಯ ಮಟ್ಟದಲ್ಲಿ ವಿಸ್ತರಣೆಗೆ ಸಂಬಂಧಿಸಿದ ಮಾನವ ಸಂಪನ್ಮೂಲದ ಬಲವರ್ಧನೆ | 17-20 |
| 2.2 | ನೇಮಕಾತಿ ಪದ್ದತಿ | 20 |
| 2.3 | ಗ್ರಾಮ ಮಟ್ಟದಲ್ಲಿ ಆವಿಷ್ಕಾರಕ ಚಟುವಟಿಕೆಗಳ ಬಲವರ್ಧನೆ (ರೈತ ಮಿತ್ರ) | 21 |
| **ಅಧ್ಯಾಯ III. ಕ್ಯಾಫಿಟೇರಿಯಾ ಚಟುವಟಿಕೆಗಳು** | | 22-27 |
| 3.1 | ಪರಿಷ್ಕೃತ ಅತ್ಮ ಕ್ಯಾಫಿಟೇರಿಯಾ | 23-24 |
| 3.2 | ಕ್ಯಾಫಿಟೇರಿಯಾ ಮಾರ್ಗದರ್ಶನಗಳು | 24-26 |
| 3.3 | ಕ್ಷೇತ್ರ ಪಾಠ ಶಾಲೆಗಳು | 26 |
| 3.4 | ಉತ್ಪನ್ನ ಆಸಕ್ತರ ಗುಂಪುಗಳ ರಚನೆ | 26 |
| 3.5 | ಕೃಷಿ ಚಿಕಿತ್ಸೆ ಹಾಗೂ ಕೃಷಿ ವ್ಯಾಪಾರ ಕೇಂದ್ರಗಳ ಭಾಗಿತ್ವ | 26-27 |
| 3.6 | ಸಮುದಾಯ ಬಾನುಲಿ ಕೇಂದ್ರಗಳ ಸ್ಥಾಪನೆ (CRSs) | 27 |
| **ಅಧ್ಯಾಯ IV. ಇತರೆ ಕಾರ್ಯಕಾರಿ ವಿಷಯಗಳು** | | 28-32 |
| 4.1 | ಇತರೆ ಕಾರ್ಯಕಾರಿ ವಿಷಯಗಳು | 29-32 |

| ಅ.ನಂ. | ವಿಷಯ | ಪುಟ ಸಂಖ್ಯೆ |
|---|---|---|
| | **ಅಧ್ಯಾಯ V. ವಿಸ್ತರಣಾ ಕಾರ್ಯಗಳನ್ನು ಒಮ್ಮುಖಗೊಳಿಸುವುದು** | 33-36 |
| 5.1 | ಒಮ್ಮುಖಗೊಳಿಸುವುದು | 34-36 |
| 5.2 | ಸಂಪರ್ಕ ಕಲ್ಪಿಸುವುದು | 36 |
| | **ಅಧ್ಯಾಯ VI. ಆಯವ್ಯಯ ಹಂಚಿಕೆ, ಬಿಡುಗಡೆ ಮತ್ತು ಬಳಕೆ** | 37-39 |
| 6.1 | ಹಣಕಾಸು ನಿಗದಿಪಡಿಸುವುದು ಮತ್ತು ಯೋಜನಾ ವೆಚ್ಚ | 38 |
| 6.2 | ಹಣಕಾಸು ಬಿಡುಗಡೆ | 38-39 |
| | **ಅಧ್ಯಾಯ VII. ಮೇಲ್ವಿಚಾರಣೆ ಹಾಗೂ ಮೌಲ್ಯಮಾಪನ** | 40-42 |
| 7.1 | ಮೇಲ್ವಿಚಾರಣೆ ಹಾಗೂ ಮೌಲ್ಯಮಾಪನ | 41-42 |
| | **ಅಧ್ಯಾಯ VIII. ಅನುಬಂಧಗಳು** | 43-90 |
| I (ಅ) | ಅಂತರ ಇಲಾಖೆಗಳ ಕಾರ್ಯ ತಂಡ (IDWG) | 44-46 |
| I (ಆ) | ರಾಜ್ಯ ಕೃಷಿ ನಿರ್ವಹಣಾ ಮತ್ತು ವಿಸ್ತರಣಾ ತರಬೇತಿ ಸಂಸ್ಥೆಗಳು (SAMETI) | 47-48 |
| I (ಇ) | ಜಿಲ್ಲಾ ಮಟ್ಟದ ಅತ್ಮ ಚಾಲನಾ ಸಮಿತಿ (GB) | 49-51 |
| I (ಈ) | ತಾಲ್ಲೂಕು ಮಟ್ಟದ ಅನುಷ್ಠಾನ ಸಮಿತಿ | 52 |
| I (ಉ) | ತಾಲ್ಲೂಕು, ಜಿಲ್ಲೆ ಮತ್ತು ರಾಜ್ಯಮಟ್ಟದ ರೈತ ಸಲಹಾ ಸಮಿತಿ | 53-55 |
| II(ಅ) | ಅತ್ಮ ಕ್ಯಾಫಿಟೇರಿಯಾ ಚಟುವಟಿಕೆಗಳು-2010 | 56-69 |
| II (ಈ) | ತಾಲ್ಲೂಕ / ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಕ್ಷೇತ್ರ ಪಾಠಶಾಲೆಗಳನ್ನು ಕಾರ್ಯೋನ್ಮುಖಗೊಳಿಸುವುದು | 70 |
| II (ಇ) | ಕ್ಷೇತ್ರ ಪಾಠ ಶಾಲೆಯ ಪರಿಕಲ್ಪನೆ | 71-72 |
| II (ಈ) | ಯೋಜನೆಯಲ್ಲಿ ತಜ್ಞರು ಮತ್ತು ಸಿಬ್ಬಂದಿಗಳ (ಅಧಿಕಾರದಲ್ಲಿರುವವರ) ಅರ್ಹತೆಗೆ ಬೆಂಬಲ | 73-74 |
| III (ಅ) | ತಜ್ಞರು ಮತ್ತು ಅಧಿಕಾರಿಗಳ ಕರ್ತವ್ಯಗಳು / ಜವಾಬ್ದಾರಿಗಳು | 75-79 |
| III (ಆ) | ವಿವಿಧ ಹುದ್ದೆಗಳ ಸಂಖ್ಯೆ, ಸಂಭಾವನೆ ಹಾಗೂ ಅರ್ಹತೆಯ ಸಾರಾಂಶ | 80-82 |
| IV | ರೈತ ಫಲಾನುಭವಿಗಳಿಗೆ ಲಾಭದಾಯಕವಾಗುವ ರೈತರ ಆಧಾರಿತ ಮುಖ್ಯ ಚಟುವಟಿಕೆಗಳ ಸಾರಾಂಶ | 83-84 |
| V | ಅತ್ಮ ಯೋಜನೆಯಡಿ ಪರಿಣಾಮಕಾರಿ ಸಂಶೋಧನೆ - ವಿಸ್ತರಣೆ ಸಂಪರ್ಕ ಜಾಲ ಸ್ಥಾಪನೆಗೆ ರೂಪರೇಶಗಳು | 85-88 |
| VI (ಅ) | ಅನುದಾನ ಬಳಕೆ ಪ್ರಮಾಣಪತ್ರ ನಮೂನೆ GFR 19 – A | 89 |
| VI (ಆ) | ವಾರ್ಷಿಕ ಲೆಕ್ಕ ಪರಿಶೀಲನೆ ಪ್ರಮಾಣ ಪತ್ರ | 90 |

# I. ಹಿನ್ನೆಲೆ ಮತ್ತು ಕಾರ್ಯಸೂಚಿ

## 1.1 ಹಿನ್ನೆಲೆ :

**1.1.1** ಭಾರತ ದೇಶದಲ್ಲಿ ವಿಸ್ತರಣಾ ಸುಧಾರಣೆಯನ್ನು ವಿಶ್ವ ಬ್ಯಾಂಕ್ ಸಂಸ್ಥೆಯ ಅನುದಾನದಡಿಯಲ್ಲಿರುವ ರಾಷ್ಟ್ರೀಯ ಕೃಷಿ ತಂತ್ರಜ್ಞಾನ ಯೋಜನೆಯ (NATP) ಘಟಕವಾದ ತಂತ್ರಜ್ಞಾನ ಪ್ರಸಾರದಲ್ಲಿ ಅನ್ವೇಷಣೆ (ITD) ದಡಿಯಲ್ಲಿ ನವೆಂಬರ್ 1998 ರಿಂದ ಎಪ್ರಿಲ್ 2005 ರವರೆಗೆ ದೇಶದ ಆಯ್ದ ಏಳು ರಾಜ್ಯಗಳ 28 ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಪರೀಕ್ಷಿಸಲಾಯಿತು. ಇದರ ಸಫಲತೆಯ ಆಧಾರವಾಗಿ, ಭಾರತ ಸರ್ಕಾರದ ಅಧಿಸೂಚನೆಯಂತೆ ವಿಸ್ತರಣಾ ಪದ್ದತಿಯನ್ನು"ರಾಜ್ಯ ವಿಸ್ತರಣಾ ಕಾರ್ಯಕ್ರಮಗಳನ್ನು ಬಲಪಡಿಸಲು ವಿಸ್ತರಣಾ ಪದ್ಧತಿಯಲ್ಲಿ ಸುಧಾರಣೆ" ಯೋಜನೆಯು ಪ್ರಾರಂಭದ ಹಂತದಲ್ಲಿ 2005-06 ರಿಂದ ಜಾರಿಗೊಳಿಸಲಾಯಿತು. ತದನಂತರ ದೇಶದ ಒಟ್ಟು 252 ಜಿಲ್ಲೆಗಳಿಗೆ ಹತ್ತನೆಯ ಪಂಚವಾರ್ಷಿಕ ಯೋಜನೆಯಲ್ಲಿ ವಿಸ್ತರಿಸಲಾಯಿತು.

**1.1.2** ವಿಸ್ತರಣಾ ಪದ್ದತಿ ನವೀಕರಣ ಹಾಗೂ ಬಲಪಡಿಸುವಿಕೆಯ ಅವಶ್ಯಕತೆಯನ್ನು ಮನಗಂಡು ರಾಷ್ಟ್ರೀಯ ಅಭಿವೃದ್ಧಿ ಪರಿಷತ್ತಿನ (NDC) ನಿರ್ಣಯದ ಪ್ರಕಾರ 2007 ರಲ್ಲಿ ರೈತ ಸಮುದಾಯದ ಕೌಶಲ್ಯ ಅಭಿವೃದ್ಧಿ ಹಾಗೂ
ಹಳ್ಳಿಗಳಲ್ಲಿ ಮಾಹಿತಿ ತಂತ್ರಜ್ಞಾನಗಳ ಸಾಮರ್ಥ್ಯ ನಿಯಂತ್ರಿಸಲು ಒತ್ತು ಕೊಡಲಾಯಿತು.

**1.1.3** ರಾಜ್ಯ ಸರ್ಕಾರದ ವಿಸ್ತರಣಾ ಘಟಕವನ್ನು ಬಲಪಡಿಸಲು 2007 ರಲ್ಲಿ ರೈತರಿಗಾಗಿ ರಾಷ್ಟ್ರೀಯ ನೀತಿ (NPF) ಯನ್ನು ಸುದೀರ್ಘವಾಗಿ ಆಲೋಚಿಸಿ ವಿಸ್ತರಣಾ ಕಾರ್ಯಕರ್ತರಿಗೆ ಮರು – ತರಬೇತಿ ಹಾಗೂ ನವೀನ ರೀತಿಯಲ್ಲಿ ವಿಸ್ತರಣಾ ವ್ಯವಸ್ಥೆಯ ಸಾಮರ್ಥ್ಯ ಹೆಚ್ಚಿಸುವುದು. ಆಯ್ಕೆ ಮಾಡಿದ ರೈತನ ಹೊಲದಲ್ಲಿ ಕ್ಷೇತ್ರ ಪಾಠಶಾಲೆಗಳನ್ನು ಏರ್ಪಡಿಸುವ ಮುಖಾಂತರ ಈ ರಾಷ್ಟ್ರೀಯ ನೀತಿಯು ರೈತರಿಂದ ರೈತರಿಗಾಗಿ ಜ್ಞಾನ ಮತ್ತು ಕೌಶಲ್ಯ ವೃದ್ಧಿಸಲು ಇಂತಹ ರೈತನು ಮುಂದಾಳತ್ವ ವಹಿಸಿ ಇತರರಿಗೆ ಮಾದರಿಯಾಗಲು ಒತ್ತು ನೀಡಲಾಯಿತು.

**1.1.4** ಕೇಂದ್ರ ಸರ್ಕಾರವು 2005 ರಿಂದ 2009 ರವರೆಗೆ ಅನುಷ್ಠಾನಗೊಳಿಸಿದ ಅತ್ಮ ಯೋಜನೆಯ ವಿಸ್ತರಣಾ ಪದ್ದತಿಯನ್ನು ವಿವಿಧ ರಾಜ್ಯ ಸರ್ಕಾರದ ಅಭಿಪ್ರಾಯದ ಆಧಾರದ ಮೇರೆಗೆ ಪ್ರಸ್ತುತ ಕೇಂದ್ರ ಸರ್ಕಾರದ ಕಾರ್ಯರೂಪದಲ್ಲಿರುವ ರಾಜ್ಯ ಕೃಷಿ ವಿಸ್ತರಣಾ ಯೋಜನೆಯನ್ನು ಬಲಪಡಿಸಲು ಮಾರ್ಪಾಡು ಮಾಡಲಾಯಿತು. **ಈ ದಿಸೆಯಲ್ಲಿ ಮಾರ್ಪಡಿಸಿದ ಅತ್ಮ ಯೋಜನೆಯ ಪರಿಷ್ಕೃತ ವರದಿಯನ್ನು ದಿನಾಂಕ 16.04.2010 ರಂದು ರಾಜ್ಯ ಸರ್ಕಾರಕ್ಕೆ ನಿಗದಿತ ವೇಳೆಗೆ ಕಾರ್ಯಸೂಚಿ ಯೋಜನೆ ತಯಾರಿಸಲು ಸುತ್ತೋಲೆ ಹೊರಡಿಸಲಾಯಿತು.**

## 1.3. ಉದ್ದೇಶಗಳು:

**1.3.1** ಅತ್ಮ ಯೋಜನೆಯಲ್ಲಿ ಪರಿಷ್ಕೃತ ಮಾಡಿದ ಮುಖ್ಯ ವಿಸ್ತರಣಾ ಪದ್ಧತಿಯು ಈ ಕೆಳಗಿನ ಉದ್ದೇಶಗಳಿಗೆ ಕೇಂದ್ರಿಕೃತವಾಗಿವೆ.

- ಅತ್ಮ ಯೋಜನೆಯನ್ನು ರಾಜ್ಯ/ಜಿಲ್ಲೆ/ತಾಲೂಕು ಮಟ್ಟದಲ್ಲಿ ಹೊಸ ತಂತ್ರಜ್ಞಾನ, ಮರುರಚನೆ ಹಾಗೂ ಸ್ವಯಂಪ್ರೇರಣೆಯ ಸಂಸ್ಥೆಯಾಗಿ ಉತ್ತೇಜನ ನೀಡುವುದು.
- ಸರಕಾರಿ – ಖಾಸಗಿ ಸಂಸ್ಥೆಗಳ ವಿಸ್ತರಣಾ ಸೇವೆಯಿಂದ ವಿವಿಧ ಇಲಾಖೆಗಳ ವಿಸ್ತರಣಾ ಯೋಜನೆಗಳನ್ನು ಬೆಂಬಲಿಸುವುದು.
- ಸಮಗ್ರ ಕೃಷಿ ಪದ್ಧತಿಗೆ ಸಹಕಾರಿಯಾಗುವಂತಹ ವಿಸ್ತಾರವಾದ ವಿಸ್ತರಣಾ ಯಾಂತ್ರಿಕ ಚಾಲನೆ ನೀಡುವುದು.
- ವಿವಿಧ ಇಲಾಖೆಗಳು ಗುರುತಿಸಲಾದ ರೈತರ ಅವಶ್ಯಕತೆಗಳ ಹಾಗೂ ಬೇಡಿಕೆಗಳ ಆಧಾರದ ಮೇಲೆ ಆಸಕ್ತ ರೈತರ ಗುಂಪು ಹಾಗೂ ಕೃಷಿ ಉತ್ಪನ್ನ ಗುಂಪುಗಳನ್ನು ವಿಸ್ತರಣೆಯಲ್ಲಿ ಅಳವಡಿಸುವುದು.
- ಕಾರ್ಯಕ್ರಮ ಯೋಜನೆ, ಕಾರ್ಯಗತ ಹಾಗೂ ಅನುಷ್ಠಾನವನ್ನು ವಿವಿಧ ಇಲಾಖೆಗಳ ಒಮ್ಮುಖಗೊಳಿಸಿ ತೀರ್ಮಾನ ತೆಗೆದುಕೊಳ್ಳುವಲ್ಲಿ ಉತ್ತೇಜಿಸುವುದು.
- ಲಿಂಗತ್ವ ಆದ್ಯತೆಯ ಮೇರೆಗೆ ಹೆಣ್ಣು ಮಕ್ಕಳಿಗಾಗಿ ಗುಂಪುಗಳನ್ನು ರಚಿಸಿ ತರಬೇತಿಗಳನ್ನು ನೀಡುವುದು.
- ಫಲಾನುಭವಿಗಳಿಂದ ಪಡೆಯಲಾದ ವಂತಿಕೆಯಿಂದ ಸುಸ್ಥಿರ ಸ್ವ–ಸ್ವಾವಲಂಬಿ ಗುಂಪುಗಳನ್ನು ರಚಿಸಿ ವಿಸ್ತರಣಾ ಸೇವೆಯನ್ನು ಬಲಗೊಳಿಸುವುದು.

**1.3.** ಈ ಕೆಳಕಾಣಿಸಿದ 1.4 ಭಾಗದಲ್ಲಿ ನಮೂದಿಸಲಾದ ಅತ್ಮ ಯೋಜನೆಯಡಿಯಲ್ಲಿ ಬಲಪಡಿಸಿದ ಸಂಸ್ಥೆಯ ವ್ಯವಸ್ಥೆ, ನಿಷ್ಠಾವಂತ ಪರಿಣಿತ ಮಾನವ ಸಂಪನ್ಮೂಲ ಮತ್ತು ನವೀಕರಿಸಿದ ಯೋಜನೆಗಳನ್ನು ಮೇಲ್ಕಾಣಿಸಿದ ಉದ್ದೇಶಗಳಿಂದ ಸಾಧಿಸಬಹುದಾಗಿದೆ.

## 1.4 ಕಾರ್ಯನೀತಿ:

ಪರಿಷ್ಕೃತ ಮಾಡಿದ ಅತ್ಮ ಯೋಜನೆಯು ಈ ಕೆಳಕಾಣಿಸಿದ ಸಂಸ್ಥೆಗಳಿಂದ ಅನುಷ್ಠಾನಗೊಳ್ಳುವುದು.

### 1.4.1 ರಾಜ್ಯಮಟ್ಟ:

i. ರಾಜ್ಯ ಮಟ್ಟದ ಮಂಜೂರಾತಿ ಸಮಿತಿ (SLSC)ಯು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿಯಲ್ಲಿ (RKVY) ಸ್ಥಾಪಿತಗೊಂಡ ಶೃಂಗ ಸಂಸ್ಥೆಯಾಗಿದ್ದು ರಾಜ್ಯ ವಿಸ್ತರಣಾ ಕಾರ್ಯಯೋಜನೆ (SEWP) ಯ ಒಪ್ಪಿಗೆ ಪಡೆಯಲು ರಾಜ್ಯ ಕ್ರಿಯಾ ಯೋಜನೆ (SAP) ಯ ಒಂದು ಭಾಗವಾಗಿದೆ.

ii. ರಾಜ್ಯ ಮಟ್ಟದ ಮಂಜೂರಾತಿ ಸಮಿತಿ (SLSC)ಯು ರಾಜ್ಯ ಮಟ್ಟದ ಅಂತರ ಇಲಾಖೆಗಳ ಕಾರ್ಯ ತಂಡ (IDWG) ದಿಂದ ಬೆಂಬಲ ಪಡೆಯುತ್ತದೆ. **ರಾಜ್ಯಮಟ್ಟದಲ್ಲಿ ಯೋಜನೆಯ ಚಟುವಟಿಕೆಗಳ ದಿನನಿತ್ಯದ ಸಂಯೋಜನೆ ಹಾಗೂ ನಿರ್ವಹಣೆಯನ್ನು ನಿರ್ವಹಿಸಲು IDWG ಜವಾಬ್ದಾರಿಯುತವಾಗಿದೆ.**

iii. ರಾಜ್ಯ ನೋಡಲ್ ಘಟಕ (SNC) ವು ರಾಜ್ಯ ನೋಡಲ್ ಅಧಿಕಾರಿ ಮತ್ತು ರಾಜ್ಯ ಸಂಯೋಜಕರನ್ನೊಳಗೊಂಡಿದ್ದು (ಸಹ ಸಿಬ್ಬಂದಿಗಳ ಸಮಿತಿ) ನಿಗದಿತ ವೇಳೆಯಲ್ಲಿ ಜಿಲ್ಲಾ ಕೃಷಿ ಕಾರ್ಯ ಯೋಜನೆ, (DAAPs) ರಾಜ್ಯ ರೈತ ಸಲಹಾ ಸಮಿತಿಯವರು ರೈತರಿಂದ ಮರು ಮಾಹಿತಿ ಪಡೆದ ವಿಷಯಗಳನ್ನು ರಾಜ್ಯ ವಿಸ್ತರಣಾ ಕ್ರಿಯಾಯೋಜನೆ (SEWP) ತಯಾರಿಕೆಯಲ್ಲಿ ಅಳವಡಿಸಿ SLSC ಯಿಂದ ಅನುಮೋದನೆಯಾದ ಯೋಜನೆಗಳನ್ನು ನಿಗದಿತ ವೇಳೆಯಲ್ಲಿ ಪಡೆಯಲು ಭರವಸೆಯುಳ್ಳವರಾಗಿರಬೇಕು. ತದನಂತರ SNC ಯು ಮಂಜೂರಾತಿ ಪಡೆದ ಕಾರ್ಯಯೋಜನೆಗಳನ್ನು ಸಮೇತಿಗಳಿಗೆ (SAMETI) ಹಾಗೂ ಅತ್ಮ (ATMA) ಗಳಿಗೆ ರವಾನಿಸಿ ಇವುಗಳ ಮುಖಾಂತರ ಅನುಷ್ಠಾನಗೊಳಿಸಲು ಮೇಲ್ವಿಚಾರಣೆ ಮಾಡುವುದು. ರಾಜ್ಯದ ವಿಸ್ತರಣಾ ಕಾರ್ಯಕರ್ತರ ಸಾಮರ್ಥ್ಯ ಹೆಚ್ಚಿಸಲು ಸಮೇತಿ (SAMETI) ಗಳು ವಾರ್ಷಿಕ ತರಬೇತಿ ಪಟ್ಟಿಯನ್ನು ತಯಾರಿಸಿ ಕಾರ್ಯಗತಗೊಳಿಸುವುದು. ಈ ರೀತಿ ಮಾಡುವುದರಿಂದ ಸಮೇತಿ (SAMETI) ಗಳು ತರಬೇತಿಗಳು ಪ್ರತಿರೂಪಗಳಾಗದಂತೆ ಹಾಗೂ ಮರುಕಳಿಸದಂತೆ ತರಬೇತಿಯ ವಿಷಯ, ತರಬೇತಿಯ ಪಟ್ಟಿ, ತರಬೇತಿದಾರರು ಸಹ ಪರಿಶೀಲಿಸಿದಂತಾಗುವುದು.

### 1.4.2 ಜಿಲ್ಲಾ ಮಟ್ಟ:

**"ಅತ್ಮ"** (ATMA) (Agricultural Technology Management Agency) ಕೃಷಿ ತಂತ್ರಜ್ಞಾನ ನಿರ್ವಹಣಾ ಸಂಸ್ಥೆಯು ರೈತರಿಗೆ ಜಿಲ್ಲಾ ಮಟ್ಟದ ಸ್ವಯಂಪ್ರೇರಿತ ಕೃಷಿ ವಿಸ್ತರಣಾ ಸೇವೆಯ ಸಂಸ್ಥೆಯಾಗಿದೆ. ಅತ್ಮ **ಚಾಲನಾ ಸಮಿತಿಯು** ಜಿಲ್ಲಾ ಮಟ್ಟದಲ್ಲಿ ಅಗ್ರ ಸಂಸ್ಥೆಯಾಗಿದ್ದು ಎಲ್ಲ ರೀತಿಯ ನೀತಿ ನಿಯಮಾವಳಿಗಳಿಗೆ ಮಾರ್ಗದರ್ಶನ ನೀಡುವುದು. ಅತ್ಮ ಚಾಲನಾ ಸಮಿತಿಗೆ ಜಿಲ್ಲಾ ಅತ್ಮ ಘಟಕವು ಅತ್ಮ ಯೋಜನಾ ನಿರ್ದೇಶಕರು, ಸಹ ಯೋಜನಾ ನಿರ್ದೇಶಕರು ಮತ್ತು ಸಿಬ್ಬಂದಿಗಳನ್ನೊಳಗೊಂಡಿದ್ದು ಅತ್ಮ ಚಾಲನಾ ಸಮಿತಿಗೆ ಸಹಾಯ ನೀಡಿ ಕಾರ್ಯನ್ಮೂಖಗೊಳಿಸುವುದು ಹಾಗೂ ಯೋಜನೆ ಅನುಷ್ಠಾನಗೊಳಿಸುವ ಕಾರ್ಯನಿರ್ವಾಹಕ ಮಂಡಳಿಯಾಗಿದೆ. ಜಿಲ್ಲಾ ಮಟ್ಟದ ರೈತರ ಸಲಹಾ ಸಮಿತಿಯು ಯೋಜನೆ ಮತ್ತು ಅನುಷ್ಠಾನಕ್ಕಾಗಿ ಜಿಲ್ಲೆಯ ರೈತರಿಂದ ಮರು – ಮಾಹಿತಿಯನ್ನು ಅತ್ಮ ಪೂರೈಸುತ್ತದೆ. ಅತ್ಮ ಯೋಜನೆಯಲ್ಲಿ ನಿಷ್ಠಾವಂತ ಸಿಬ್ಬಂದಿಗಳು ಜಿಲ್ಲಾ ಮಟ್ಟದಲ್ಲಿ ನೋಡಲ್ ಏಜನ್ಸಿಯಾಗಿ ಕೃಷಿ ವಿಸ್ತರಣಾ ಪದ್ದತಿ ನಿರ್ವಹಣೆಯನ್ನು ಸಮಗ್ರವಾಗಿ ನಿರ್ವಹಿಸುದಲ್ಲದೆ **ವ್ಯವಸ್ಥಿತ ಸಂಶೋಧನಾ ಮತ್ತು ವಿಸ್ತರಣಾ ಯೋಜನೆ (SREP) ರಚಿಸುವ** ಹೊಣೆಗಾರಿಕೆಯನ್ನು ಹೊಂದಿದೆ. ಈ ಕಾರ್ಯಸೂಚಿಯ ಪ್ರಕ್ರಿಯೇಯನ್ನು 1.4.7 ಖಂಡಿಕೆಯಲ್ಲಿ ನಮೂದಿಸಲಾಗಿದೆ.

### 1.4.3 ತಾಲೂಕ ಮಟ್ಟ:

ತಾಲೂಕಾ ಮಟ್ಟದಲ್ಲಿ ಅನುಷ್ಠಾನ ಸಮಿತಿ (TIC) (ಈ ತಂಡವು ತಾಲೂಕಾ ಮಟ್ಟದಲ್ಲಿ ಕೃಷಿ ವಿಜ್ಞಾನಿಗಳು ಮತ್ತು ವಿವಿಧ ಕೃಷಿ ಹಾಗೂ ಕೃಷಿಯೇತರ ಅಭಿವೃದ್ಧಿ ಇಲಾಖೆಗಳ ಅಧಿಕಾರಿಗಳನ್ನೊಳಗೊಂಡಿದೆ) ಮತ್ತು **ತಾಲೂಕಾ ಮಟ್ಟದ ರೈತ ಸಲಹಾ ಸಮಿತಿ (BFAC)** (ಈ ಗುಂಪು ತಾಲೂಕಾ ಮಟ್ಟದ ರೈತರನ್ನೊಳಗೊಂಡಿದೆ). ಈ ಎರಡು ಸಮಿತಿಗಳು ಒಟ್ಟು ಗೂಡಿ ಕಾರ್ಯನಿರ್ವಹಿಸುವವು (BFAC ಯು ರೈತರಿಂದ ಮರು ಮಾಹಿತಿ ಹಾಗೂ ಪರಿಕರಗಳನ್ನು ಪೂರೈಸುವುದು). BFAC ಇದು ರೈತ ಆಸಕ್ತಿ ಗುಂಪು (FIG) ಗಳನ್ನು ಪ್ರತಿನಿಧಿಸುತ್ತದೆ. ತಾಲೂಕಾ ಮಟ್ಟದ ರೈತ ಸಂಸ್ಥೆಗಳು, ತಾಲೂಕಾ ಅನುಷ್ಠಾನ ಸಮಿತಿಗೆ ಸರದಿಯ ಪ್ರಕಾರ ಸಲಹೆಗಳನ್ನು ಕೊಡುತ್ತದೆ. **ತಾಲೂಕಾ ಅತ್ಮ ಘಟಕವು, ವಿಸ್ತರಣೆ ಬಲಪಡಿಸಲು ಈ ಎರಡು ಸಮಿತಿಗಳನ್ನು ಹೊಂದಿದ್ದು, ಅವು ಯಾವವೆಂದರೆ ತಾಲೂಕಾ ತಂತ್ರಜ್ಞಾನ ವ್ಯವಸ್ಥಾಪಕರು ಮತ್ತು ವಿಷಯ ತಜ್ಞರು ವಿಸ್ತರಣೆ ಚಟುವಟಿಕೆಗಳ ತಯಾರಿಕೆ ಮತ್ತು ಕಾರ್ಯಸೂಚಿಯನ್ನು ತಾಲೂಕ ಮಟ್ಟದಲ್ಲಿ ಪೂರೈಸುವರು.**

### 1.4.4 ಗ್ರಾಮ ಮಟ್ಟ :

i. **ಗ್ರಾಮ ಮಟ್ಟದಲ್ಲಿ ರೈತ ಮಿತ್ರರು [Farmer Friend (FF)] ವಿಸ್ತರಣಾ ಪದ್ಧತಿ ಮತ್ತು ರೈತರ ನಡುವೆ ಸಂಪರ್ಕ ಏರ್ಪಡಿಸುವ ಮುಖ್ಯವಾಯಿನಿಯಾಗಿದ್ದಾರೆ (ಪ್ರತಿ ಎರಡು ಗ್ರಾಮಗಳಿಂದ ಒಬ್ಬ ರೈತ ಮಿತ್ರ).** ಗ್ರಾಮ ಮಟ್ಟದಲ್ಲಿ ಈ ರೈತ ಮಿತ್ರರು ಕೃಷಿ ಹಾಗೂ ಕೃಷಿಯೇತರ ಚಟುವಟಿಕೆಗಳಿಗೆ ಮಾರ್ಗದರ್ಶಿಯಾಗಿರಬೇಕು. ರೈತ ಮಿತ್ರರು ರೈತರ ಗುಂಪುಗಳನ್ನು ಸಂಘಟಿಸಿ ರೈತರ ಅವಶ್ಯಕತೆಗಳಿಗನುಗುಣವಾಗಿ ಸಾಮಾನ್ಯ ಸೇವಾ ಕೇಂದ್ರಗಳಿಂದ/ ರೈತ ಕರೆ ಕೇಂದ್ರಗಳಿಂದ ಮಾಹಿತಿ/ಸೇವೆ ಪಡೆದು ಅಂತಹ ಗುಂಪುಗಳಿಗೆ ಪ್ರತಿಯೊಬ್ಬ ರೈತನಿಗೂ ಮತ್ತು ರೈತ ಮಹಿಳೆಗೂ ನೇರವಾಗಿ (ಮುಖಾಮುಖಿ) ಚರ್ಚಾಕೂಟ ಅಥವಾ ಗುಂಪು ಚರ್ಚಾಕೂಟ ಏರ್ಪಡಿಸಿ ಮಾಹಿತಿ ಪ್ರಸಾರ ಮಾಡುವುವಲ್ಲಿ ಸಹಕರಿಸುವುದು.

ii. ವಿಸ್ತರಣಾ ಕಾರ್ಯಕರ್ತರು ರೈತರಿಗೆ ಉತ್ತಮ ಗುಣಮಟ್ಟದ ಪರಿಕರಗಳನ್ನು ದೊರಕಿಸಿಕೊಡುವಲ್ಲಿ ಮತ್ತು ಅವಶ್ಯವಿರುವ ತಾಂತ್ರಿಕ ಸಲಹೆ ನೀಡುವಲ್ಲಿ ಆಯಾ ಯೋಜನೆಗಳಲ್ಲಿರುವ **ಕೃಷಿ ಉದ್ದಿಮೆದಾರರು** ಪೂರಕವಾಗಲು ಪ್ರಯತ್ನಿಸುವುದು.

iii. ಪ್ರತಿ ತಾಲೂಕುಗಳಲ್ಲಿ 3 ರಿಂದ 5 **ಕ್ಷೇತ್ರ ಪಾಠಶಾಲೆಗಳು** ಕೇಂದ್ರ ಬಿಂದುಗಳಾಗಿ ಸ್ಥಾಪನೆಗೊಂಡು, ರೈತರಿಂದ ರೈತರಿಗಾಗಿ ಸುವ್ಯವಸ್ಥಿತವಾದ ವಿಸ್ತರಣಾ ಪದ್ಧತಿಯಾಗಿ ಸೇವೆ ಸಲ್ಲಿಸುತ್ತವೆ.

### 1.4.5 ಸುವ್ಯವಸ್ಥಿತ ಸಂಸ್ಥೆಯ ವಿವಿಧ ಹಂತಗಳ ರಚನೆಯನ್ನು ಈ ಮುಂದಿನ ರೇಖಾ ಚಿತ್ರದ ಮೂಲಕ ವಿವರಿಸಲಾಗಿದೆ



### 1.4.6 ಸಹಭಾಗಿತ್ವದ ಸಮಿತಿಗಳು:

ರಾಜ್ಯದಲ್ಲಿ ವಿವಿಧ ಹಂತದ ಸಹಭಾಗಿತ್ವದ ಸಮಿತಿಗಳ ರಚನೆ ಈ ಕೆಳಗಿನಂತಿವೆ:

- **ರಾಜ್ಯ ಮಟ್ಟದಲ್ಲಿ :** ಅಂತರ ಇಲಾಖೆಗಳ ಕಾರ್ಯ ತಂಡ (IDWG)
  ಸಮೇತಿಗಳ ಕಾರ್ಯನಿರ್ವಾಹಕ ಸಮಿತಿ (SAMETI)
  ರಾಜ್ಯ ರೈತರ ಸಲಹಾ ಸಮಿತಿ (SFAC)

- **ಜಿಲ್ಲಾ ಮಟ್ಟದಲ್ಲಿ :** ಅತ್ಮ ಚಾಲನಾ ಸಮಿತಿ (GB)
  ಜಿಲ್ಲಾ ರೈತರ ಸಲಹಾ ಸಮಿತಿ (DFAC)

- **ತಾಲೂಕ ಮಟ್ಟದಲ್ಲಿ :** ತಾಲೂಕ ಅನುಷ್ಠಾನ ಸಮಿತಿ (TIC)
  ತಾಲೂಕ ರೈತರ ಸಲಹಾ ಸಮಿತಿ (BFAC)

ಈ ಸಮಿತಿಗಳ ಪರಿಷ್ಕೃತ ರಚನೆ, ಕಾರ್ಯ ಮತ್ತು ನಿಯೋಗ (mandate) ಗಳನ್ನು ಅನುಬಂಧ **– I (ಅ)** ರಿಂದ **(ಉ)** ಗಳಲ್ಲಿ ನಮೂದಿಸಲಾಗಿದೆ.

### 1.4.7 ಕ್ರಿಯಾಯೋಜನೆಗಳ ಕಾರ್ಯ ವಿಧಾನ :

- ವ್ಯವಸ್ಥಿತ ಸಂಶೋಧನೆ ಮತ್ತು ವಿಸ್ತರಣಾ ಯೋಜನೆಯು (SREP) ಜಿಲ್ಲೆಯಲ್ಲಿ ಕೃಷಿ ಪರಿಸರ ಪರಿಸ್ಥಿತಿ (Agro-ecological conditions) ಗಳನ್ನು ಗಮನದಲ್ಲಿಟ್ಟುಕೊಂಡು ಆದ್ಯತೆಯ ಮೇರೆಗೆ ಸಂಶೋಧನೆ ಮತ್ತು ವಿಸ್ತರಣೆಯನ್ನು ಗುರುತಿಸಲಾಗಿರುವ ಒಂದು ವಿಸ್ತಾರವಾದ ದಾಖಲೆ, ಕೃಷಿ ಹಾಗೂ ವಿವಿಧ ಅಭಿವೃದ್ಧಿ ಇಲಾಖೆಗಳು ಸಧ್ಯದಲ್ಲಿ ಉದ್ಭವಿಸಿರುವ ತಂತ್ರಜ್ಞಾನಗಳ ಅಂತರ ಹಾಗೂ ಕೈಗೊಳ್ಳಬೇಕಾದ ವಿಸ್ತಾರವಾದ ಕಾರ್ಯಚಟುವಟಿಕೆಗಳನ್ನು ಹೊಂದಿರುತ್ತದೆ. ಹೊಸ ಜಿಲ್ಲೆಗಳಿಗೆ SREP ಗಳನ್ನು ವಿವಿಧ ಅಭಿವೃದ್ಧಿ ಇಲಾಖೆಗಳು, ಕೃಷಿ ವಿಜ್ಞಾನ ಕೇಂದ್ರ, ಪಂಚಾಯತ ರಾಜ್ ಸಂಸ್ಥೆಗಳು, ಖಾಸಗಿ ವಲಯಗಳು, ರೈತರು ಹಾಗೂ ಇತರೆ ಭಾಗಿದಾರರ ಸಹಯೋಗದೊಂದಿಗೆ ಜಿಲ್ಲಾ ಮಟ್ಟದಲ್ಲಿ ತಯಾರಿಸಲಾಗುವುದು.

- **ಈ ವ್ಯವಸ್ಥಿತ ಸಂಶೋಧನೆ ಮತ್ತು ವಿಸ್ತರಣೆ ಯೋಜನೆಯು (SREP) ಪ್ರತಿ 5 ವರ್ಷಕ್ಕೊಮ್ಮೆ ಹೊಸದಾಗಿ ಕೃಷಿಯಲ್ಲಿ ಗುರುತಿಸಲಾದ ಕೊರತೆಗಳನ್ನು (Gaps) ಮತ್ತು ಪ್ರಾಮುಖ್ಯತೆ ಮೇರೆಗೆ ಹೊರ ಹೊಮ್ಮುವ ಕ್ಷೇತ್ರಗಳ ಮಾಹಿತಿಯನ್ನು ಪುನಃ ಬೇಟಿ ನೀಡಿ ದಾಖಲಿಸಲಾಗುವುದು.**

- ವಾರ್ಷಿಕ ತಳಹದಿಯ ಮೇಲೆ ತಾಲೂಕ ಕ್ರಿಯಾ ಯೋಜನೆಗಳನ್ನು (BAPs) ತಯಾರಿಸಲು SREP ದಾಖಲೆ ಗಳು ಮಾದರಿಯಾಗಿರುತ್ತವೆ. ತದನಂತರ ತಾಲೂಕ ಕ್ರಿಯಾ ಯೋಜನೆಗಳನ್ನು ಕ್ರೂಢಿಕರಿಸಿ ಜಿಲ್ಲಾ ಮಟ್ಟದ ಕೃಷಿ ಕ್ರಿಯಾ ಯೋಜನೆಗಳನ್ನು (DAAPs) ತಯಾರಿಸುವುದು.
- ಜಿಲ್ಲಾ ಯೋಜನೆಗಳನ್ನು ರಚಿಸುವಾಗ ಜಿಲ್ಲೆಯ ಸಮಗ್ರ ಕೃಷಿ ಯೋಜನೆಗಳನ್ನು( C-DAP) RKVY ನ ಅಡಿಯಲ್ಲಿ ಜಿಲ್ಲೆಗೆ ರಚಿಸಿದ ಯೋಜನೆಗಳಿಗೆ ಉಪ ಕ್ರಿಯಾ ಯೋಜನೆಗಳಾಗಿವೆ
- ಜಿಲ್ಲಾ ಕೃಷಿ ಕ್ರಿಯಾ ಯೋಜನೆಗಳು (DAAPs) ಕ್ರೋಢಿಕರಣಗೊಂಡ ರಾಜ್ಯ ವಿಸ್ತರಣಾ ಕಾರ್ಯ ಯೋಜನೆಗಳಾಗಿ (SEWP) ನಂತರ ರಾಜ್ಯ ಕ್ರಿಯಾ ಯೋಜನೆಯ (SAP) ಭಾಗವಾಗುವುದು.




### 1.4.8 ಯೋಜನೆಯ ಘಟಕಗಳು:

**ಪರಿಷ್ಕೃತ ಯೋಜನೆಯು ಎರಡು ಉಪ ಗುಂಪು ಚಟುವಟಿಕೆಗಳನ್ನೊಗೊಂಡಿದೆ**

I. **ವಿವಿಧ ಹಂತಗಳಲ್ಲಿ ಕಾಲಕಾಲಕ್ಕೆ ತಜ್ಞರ ಮತ್ತು ಕಾರ್ಯಕರ್ತರ ಬೆಂಬಲವನ್ನು ಯೋಜನೆಯ ಹಂತದ ಹಾಗೂ ಒಪ್ಪಿಗೆ ಅನುದಾನದ ಮೇರೆಗೆ ಸಂಬಂಧಪಟ್ಟ ಸ್ಥಳಗಳಲ್ಲಿ ನಿಯೋಜಿಸುವುದು,** ಈಗಾಗಲೆ ಅನುಬಂಧ **– II (ಅ) ಮತ್ತು III (ಆ)** ದಲ್ಲಿ ಇರುವಂತೆ ಆಯಾ ರಾಜ್ಯಗಳಲ್ಲಿ ಈಗಾಗಲೇ ಇರುವ ಅಥವಾ ಅದಕ್ಕಿಂತ ಹೆಚ್ಚಿನ ಸಂಖ್ಯೆಯ ಸಮಾನ ವಿದ್ಯಾರ್ಹತೆ ಹಾಗೂ ಅನುಭವ ಇರುವ ವಿಸ್ತರಣಾ ಕಾರ್ಯ ಚಟುವಟಿಕೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿಸ್ತರಣಾ ಕಾರ್ಯಕರ್ತರ ಸಂಖ್ಯೆಯನ್ನು ಕಡಿಮೆಗೊಳಿಸುವುದು.
**ವಿಷಯ ತಜ್ಞರ ಹಾಗೂ ಕಾರ್ಯಕರ್ತರ ವಿವಿಧ ಅಭಿವೃದ್ಧಿ ಇಲಾಖೆಗಳ ಬೆಂಬಲವನ್ನು ರಾಜ್ಯ, ಜಿಲ್ಲೆ, ತಾಲೂಕು ಹಾಗೂ ಗ್ರಾಮ ಮಟ್ಟದಲ್ಲಿ ಶೇ.50% ರಷ್ಟು 2010-11 ರಲ್ಲಿ ಇರುವ ರಾಜ್ಯದ ಹಣಕಾಸಿನ**

**ಅನುದಾನದ ಆಧಾರದ ಮೇಲೆ ನಿಯೋಜಿಸಬೇಕು.** ನಿಯೋಜಿಸಿರುವ ನಿಗದಿತ ಶೇ.೫೦% ರಷ್ಟು ಸಂಖ್ಯೆಯ ಹುದ್ದೆಗಳನ್ನು ವಿವಿಧ ಹಂತಗಳಲ್ಲಿ ಆದ್ಯತೆ ಮೇರೆಗೆ ರಾಜ್ಯ ಸರ್ಕಾರವು ನಿರ್ಧರಿಸಬೇಕು. ತದನಂತರ ಮುಂಬರುವ ವರ್ಷಗಳಲ್ಲಿ ಹೆಚ್ಚಿನ ಸಂಖ್ಯೆಯ ಮಾನವ ಸಂಪನ್ಮೂಲವನ್ನು ಹಂತ ಹಂತವಾಗಿ ಶೇಕಡವಾರು ಹೆಚ್ಚಿಸಲಾಗುವುದು.

## II. ಕ್ಯಾಫಿಟೇರಿಯಾ ಚಟುವಟಿಕೆಗಳು:

**ನಿಷ್ಠಾವಂತ ಮಾನವ ಸಂಪನ್ಮೂಲಗಳ ಅವಶ್ಯಕತೆಯಲ್ಲದೆ ಕ್ಯಾಫಿಟೇರಿಯಾ ಚಟುವಟಿಕೆಗಳನ್ನು ರಚಿಸಿ ಅನುಬಂಧ – II ರಲ್ಲಿ ಸೂಚಿಸಲಾಗಿದೆ. ರಾಜ್ಯಗಳು ತಮಗೆ ಸೂಕ್ತ ಚಟುವಟಿಕೆಗಳನ್ನು ಕ್ಯಾಫಿಟೇರಿಯಾದಿಂದ ಆಯ್ಕೆ ಮಾಡಬಹುದು.** ಆಯಾ ಹಣಕಾಸಿನ ವರ್ಷದಲ್ಲಿ ಲಭ್ಯವಿರುವ ಅನುದಾನವನ್ನು ಗಮನದಲ್ಲಿಟ್ಟುಕೊಂಡು ಕ್ಯಾಫಿಟೇರಿಯಾ ಚಟುವಟಿಕೆಗಳಿಗೆ ಶೇಕಡಾವಾರು ಸಮನ್ವಯ ವೆಚ್ಚವನ್ನು ಸೀಮಿತಗೊಳಿಸಬೇಕು. ಇದರಿಂದ ಆದ್ಯತೆ ಮೇರೆಗೆ ರಾಜ್ಯದಲ್ಲಿ ಅನುಕೂಲಕರ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಅನುಕೂಲವಾಗುವುದು.

# II.ತಜ್ಞರ ಮತ್ತು ಕಾರ್ಯಕರ್ತರ ಬೆಂಬಲ

## 2.1. ರಾಜ್ಯಮಟ್ಟದಲ್ಲಿ ವಿಸ್ತರಣೆ ಸಂಬಂಧಿಸಿದ ಮಾನವ ಸಂಪನ್ಮೂಲದ ಬಲವರ್ಧನೆ:

**ವಿಸ್ತರಣೆ ಸಂಬಂಧಿಸಿದ ಮಾನವ ಸಂಪನ್ಮೂಲ ಬಲವರ್ಧನೆಯನ್ನು ರಾಜ್ಯ, ಜಿಲ್ಲೆ ಮತ್ತು ತಾಲೂಕ ಮಟ್ಟ ಹೀಗೆ ಮೂರು ಹಂತಗಳಲ್ಲಿ ಪ್ರಸ್ತಾವಿಸಲಾಗಿದೆ. ಈ ಯೋಜನೆಯಡಿ ನೇಮಕಗೊಂಡ ವಿಸ್ತರಣೆಗೆ ಸಂಬಂದಿಸಿದ ಸಿಬ್ಬಂದಿಗಳ ಪಾತ್ರ ಮತ್ತು ಹೊಣೆಗಾರಿಕೆಯನ್ನು ಅನುಬಂಧ – III ಅ ರಲ್ಲಿ ತಿಳಿಸಲಾಗಿದೆ.** ವಿವಿಧ ಹಂತಗಳಲ್ಲಿ ಪರವಾನಿಗೆ ನೀಡಿದ ಬೆಂಬಲ, ತಜ್ಞರ ಮತ್ತು ಕರ್ಯರ್ಕರ್ತರ ವಿವರ / ಪ್ರತಿಯೊಂದು ಹಂತದ ಹುದ್ದೆಗಳ ಸಂಖ್ಯೆ, ಆಯ್ಕೆ ವಿಧಾನ, ಪ್ರಸ್ತಾವಿಸಿದ ಸಂಭಾವನೆ, ವಿದ್ಯಾರ್ಹತೆ ಹಾಗೂ ಮತ್ತಿತರ ವಿವರಣೆಯನ್ನು ಅನುಬಂಧ ï III ಆ ಯಲ್ಲಿ ನೀಡಲಾಗಿದೆ.

**ಪರಿಷ್ಕೃತ ಅತ್ಮ ಯೋಜನೆಯಡಿಯಲ್ಲಿ ವಿವಿಧ ಹಂತಗಳಲ್ಲಿ ಆಡಳಿತ ರಚನೆ ಮತ್ತು ಅಧಿಕಾರಿಗಳು ಈಕೆಳಗಿನಂತೆ ಇರುತ್ತಾರೆ.**



### 2.1.1 ರಾಜ್ಯ ಮಟ್ಟದಲ್ಲಿ:

**(1) ರಾಜ್ಯ ನೋಡಲ್ ಅಧಿಕಾರಿ:** ರಾಜ್ಯ ನೋಡಲ್ ಕೋಶವು ರಾಜ್ಯ ನೋಡಲ್ ಅಧಿಕಾರಿ, ರಾಜ್ಯ ಸಂಯೋಜನಾಧಿಕಾರಿ ಮತ್ತು ಸಹಾಯಕ ಸಿಬ್ಬಂದಿಗಳನ್ನೊಳಗೊಂಡಿರುವುದು. ರಾಜ್ಯ ಸರಕಾರವು ರಾಜ್ಯ ನೋಡಲ್ ಅಧಿಕಾರಿಯನ್ನು ನಿಯುಕ್ತಿಗೊಳಿಸುವದರೊಂದಿಗೆ ಅವಶ್ಯಕವಾದ ಸಚಿವಾಲಯದ ಬೆಂಬಲವನ್ನು ನೀಡುವದು. ಅತ್ಮ ಕ್ಯಾಫಿಟೇರಿಯಾದಲ್ಲಿ ನಿಗದಿಪಡಿಸಿದಂತೆ ರಾಜ್ಯ ಮಟ್ಟದಲ್ಲಿ ಚಟುವಟಿಕೆಗಳನ್ನು ಕೈಗೊಳ್ಳಲು, ರಾಜ್ಯ ಮಟ್ಟದಲ್ಲಿ ಇತರೆ ಇಲಾಖೆಗಳೊಂದಿಗೆ ಒಮ್ಮುಖಗೊಳಿಸಲು ಮತ್ತು ರಾಜ್ಯ ನೋಡಲ್ ಅಧಿಕಾರಿಗೆ ಸಹಾಯಕವಾಗಲು (ಕೃಷಿ ಆಯುಕ್ತರು/ನಿರ್ದೇಶಕರು ಅಥವಾ ತತ್ಸಮಾನ) ಒಟ್ಟಾರೆ ರಾಜ್ಯದಲ್ಲಿಯ ಕೃಷಿ ವಿಸ್ತರಣಾ ವ್ಯವಸ್ಥೆಯ ನಿರ್ವಹಣೆಗೆ ಪ್ರತಿ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಿಗೆ ಒಬ್ಬ ರಾಜ್ಯ ಸಂಯೋಜನಾ ಅಧಿಕಾರಿಯ ಒಪ್ಪಿಗೆ ನೀಡಲಾಗಿದೆ. ರಾಜ್ಯ ಸಂಯೋಜನಾ ಅಧಿಕಾರಿಯನ್ನು ಈ ಯೋಜನೆಯಡಿ ಗುತ್ತಿಗೆ ಆಧಾರದ ಮೇರೆಗೆ ನೇಮಕಗೊಳಿಸುವದು. ರಾಜ್ಯ ಸಂಯೋಜನಾ ಅಧಿಕಾರಿಯ ಕಾರ್ಯಗಳನ್ನು **ಅನುಬಂಧ – III ಅ** ರಲ್ಲಿ ತಿಳಿಸಲಾಗಿದೆ. ರಾಜ್ಯ ಸಂಯೋಜನಾ ಅಧಿಕಾರಿಯು ರಾಜ್ಯ ನೋಡಲ್ ಅಧಿಕಾರಿಯ ಅಧೀನದಲ್ಲಿ/ಮೇಲ್ವಿಚಾರಣೆಯಲ್ಲಿ ಕಾರ್ಯನಿರ್ವಹಿಸುವರು.

(2) **ಸಮೇತಿಗಳು:** ರಾಜ್ಯ, ಜಿಲ್ಲೆ ಮತ್ತು ತಾಲೂಕ ಮಟ್ಟದ ವಿಸ್ತರಣಾ ಕಾರ್ಯಕರ್ತರ ನಿಯಮಿತವಾಗಿ ತರಬೇತಿ ಮತ್ತು ಕೌಶಲ್ಯ ವೃದ್ಧಿಸಲು ಹಾಗೂ ಗ್ರಾಮಾಂತರ ಪ್ರದೇಶಗಳ ವಿಸ್ತರಣಾ ಕಾರ್ಯಕರ್ತರನ್ನು ಮತ್ತು ಕ್ಷೇತ್ರ ಭೇಟಿಗಳೊಂದಿಗೆ ರೈತರನ್ನು ತಲುಪುವ ನಿಟ್ಟಿನಲ್ಲಿ ಈ ಕೆಳಗಿನ ಮಾನವ ಸಂಪನ್ಮೂಲವನ್ನು ಪ್ರತಿ ರಾಜ್ಯಕ್ಕೆ ನೀಡಲಾಗಿದೆ. **ಸಮೇತಿ ನಿರ್ದೇಶಕರು, ಅತ್ಮ ಯೋಜನೆಯಡಿ ಆಯ್ಕೆಯಾದ ರಾಜ್ಯ ನೋಡಲ್ ಅಧಿಕಾರಿಯ ಮಾರ್ಗದರ್ಶನದಲ್ಲಿ ಕಾರ್ಯ ನಿರ್ವಹಿಸುವರು. ಹಲವು ಸಂಧರ್ಭಗಳಲ್ಲಿ ರಾಜ್ಯ ನೋಡಲ್ ಅಧಿಕಾರಿಯು ಸಮನಾದ ದರ್ಜೆಯ ಅಥವಾ ಸಮೇತಿ ನಿರ್ದೇಶಕರುಗಳಿಗಿಂತ ಮೇಲ್ದರ್ಜೆಯ ಅಧಿಕಾರಿಯಾಗಿರದಿದ್ದರೆ, ಸಮೇತಿ ನಿರ್ದೇಶಕರು ನೋಡಲ್ ಅಧಿಕಾರಿಯು ಯಾವ ಅಧಿಕಾರಿಯ ನಿರ್ದೇಶನಕ್ಕೊಳಪಡುವರೋ ಆ ಅಧಿಕಾರಿಯ ನಿರ್ದೇಶನದಲ್ಲಿ ಕೆಲಸ ನಿರ್ವಹಿಸುವರು.** ಸಮೇತಿಗಳ ಸಹಯೋಗಿ ಸಿಬ್ಬಂದಿಗಳು (ಉಪ ನಿರ್ದೇಶಕರುಗಳು) ಸಮೇತಿ ನಿರ್ದೇಶಕರ ಅಧೀನಕ್ಕೊಳಪಡುವರು. ಸಮೇತಿ ನಿರ್ದೇಶಕರ ಮತ್ತು ಸಹಯೋಗಿಗಳ ಕಾರ್ಯಗಳನ್ನು **ಅನುಬಂಧ – III ಅ** ರಲ್ಲಿ ನೀಡಲಾಗಿದೆ.

**ರಾಜ್ಯದ ಒಟ್ಟು ಸಿಬ್ಬಂದಿಗಳ ಅವಕಾಶವು ಈ ಕೆಳಗಿನಂತಿದೆ.**

| ಸಮೇತಿ | ಹುದ್ದೆಗಳು/ ತಾಲ್ಲೂಕುಗಳ ಸಂಖ್ಯೆ | ನಿರ್ದೇಶಕರು | ಉಪ ನಿರ್ದೇಶಕರು | ಲೆಕ್ಕಾಧಿಕಾರಿ /ಗುಮಾಸ್ತ | ಗಣಕಯಂತ್ರ ಸಂಯೋಜಕರು | ಒಟ್ಟು |
|---|---|---|---|---|---|---|
| ಕೇಂದ್ರ (ಉತ್ತರ) | 80 | 1 | 4 | 1 | 1 | 7 |
| ಕೇಂದ್ರ (ದಕ್ಷಿಣ) | 96 | 1 | 4 | 1 | 1 | 7 |
| ರಾಜ್ಯದ ಕೇಂದ್ರ ಸ್ಥಾನದಲ್ಲಿ ರಾಜ್ಯ ಸಂಯೋಜನಾಧಿಕಾರಿ – 1 | | | | | | 1 |
| | | | | | | 15 |

**2.1.2. ಜಿಲ್ಲಾ ಮಟ್ಟದಲ್ಲಿ: ಪ್ರತಿ ಅತ್ಮ ಘಟಕವು ಕೆಳಗಿನ ಪ್ರಮುಖ ಐದು ಜನ ಸಿಬ್ಬಂದಿಗಳನ್ನೊಳಗೊಂಡಿರುವದು. ಯೋಜನಾ ನಿರ್ದೇಶಕರ ಒಟ್ಟಾರೆ ಮೇಲ್ವಿಚಾರಣೆಯಲ್ಲಿ ಅತ್ಮವು ನಿಯಮಿತಿವಾಗಿ ಅತ್ಮ ಚಾಲನಾ ಸಮಿತಿಯ ಸಭೆಗಳನ್ನು ಕೈಗೊಳ್ಳುವುದರೊಂದಿಗೆ ಜಿಲ್ಲೆಯ ಕೃಷಿ ವಿಸ್ತರಣಾ ಚಟುವಟಿಕೆಗಳ ನಿರ್ವಹಣೆಗೆ ಹೊಣೆಯಾಗಿರುವದು.**

1) ಯೋಜನಾ ನಿರ್ದೇಶಕರು ï 1

2) ಉಪ ಯೋಜನಾ ನಿರ್ದೇಶಕರು ï 2

3) ಲೆಕ್ಕಾಧಿಕಾರಿï ವïಆಡಳಿತ ಗುಮಾಸ್ತ ï 1

4) ಗಣಕಯಂತ್ರ ಸಂಯೋಜಕ/ಚಾಲಕರು ï 1

ಅತ್ಮ ಯೋಜನಾ ನಿರ್ದೇಶಕರು ಅತ್ಮ ಚಾಲನಾ ಸಮಿತಿಯ ಸಭಾಪತಿಗಳಿಗೆ ವರದಿ ಸಲ್ಲಿಸುವರು ಮತ್ತು ಉಪ ಯೋಜನಾ ನಿರ್ದೇಶಕರು ಅತ್ಮ ಯೋಜನಾ ನಿರ್ದೇಶಕರ ಆಡಳಿತದಡಿಯಲ್ಲಿ ಕೆಲಸ ನಿರ್ವಹಿಸುವರು. ಯೋಜನಾ ನಿರ್ದೇಶಕರ ಮತ್ತು ಉಪ ಯೋಜನಾ ನಿರ್ದೇಶಕರ ಕಾರ್ಯ ಮತ್ತು ಹೊಣೆಗಳನ್ನು **ಅನುಬಂಧ – III ಅ** ರಲ್ಲಿ ತಿಳಿಸಲಾಗಿದೆ.

**2.1.3. ತಾಲೂಕ ಮಟ್ಟದಲ್ಲಿ:**

**(1) ತಾಲೂಕ ಮಟ್ಟದ ಅತ್ಮ ದಲ್ಲಿ ಸಂಬಂದಿಸಿದ ತಾಲ್ಲೂಕ ಮಟ್ಟದ ಅನುಷ್ಠಾನ ಸಮಿತಿ (TIC) ಮತ್ತು ರೈತರ ಸಲಹಾ ಸಮಿತಿಯ (FAC) ಚಟುವಟಿಕೆಗಳ ಸಂಯೋಜನೆಗೆ ಈ ಯೋಜನೆಯಡಿ ಒಬ್ಬ ತಾಲೂಕ ತಂತ್ರಜ್ಞಾನ ವ್ಯವಸ್ತಾಪಕರನ್ನು ನೀಡಲಾಗಿದೆ. ತಾಲೂಕ ತಂತ್ರಜ್ಞಾನ ವ್ಯವಸ್ಥಾಪಕರು (BTM) ಅತ್ಮ ಸಂಬಂದಿಸಿದ ಎಲ್ಲಾ ಚಟುವಟಿಕೆಗಳನ್ನು ತಾಲೂಕ ಮಟ್ಟದ ಅನುಷ್ಠಾನ ಸಮಿತಿ (TIC) ಮೇಲ್ವಿಚಾರಣೆಯಲ್ಲಿ ಕಾರ್ಯನಿರ್ವಹಿಸುವರು.** ತಾಲೂಕ ತಂತ್ರಜ್ಞಾನ ವ್ಯವಸ್ಥಾಪಕರು (BTM) ಈ ಕೆಳಗಿನ ಕಾರ್ಯಗಳನ್ನು ನಿರ್ವಹಿಸುವುದು

- ತಾಲೂಕ ತಂತ್ರಜ್ಞಾನ ವ್ಯವಸ್ಥಾಪಕರು ತಾಲೂಕ ಕ್ರಿಯಾ ಯೋಜನೆ ತಯಾರಿಸಲು ಹಾಗೂ ಅನುಷ್ಠಾನ ಗೊಳಿಸಲು ತಾಲೂಕ ಮಟ್ಟದ ಅನುಷ್ಠಾನ ಸಮಿತಿಗೆ (TIC) ಸಹಾಯ ಒದಗಿಸುವರು.
- ಕ್ಷೇತ್ರ ಪಾಠಶಾಲೆಗಳನ್ನು ಕಾರ್ಯರೂಪಕ್ಕೆ ತರುವುದು (ರೈತರಿಂದ ರೈತರಿಗೆ ವಿಸ್ತರಣೆಯ ಪ್ರಮುಖ ಚಟುವಟಿಕೆ)
- ರೈತ ಆಸಕ್ತ ಗುಂಪುಗಳ ಮತ್ತು ಉತ್ಪನ್ನಗಳ ಆಸಕ್ತರ ಗುಂಪುಗಳ (ಒಂದು ವಿಶಿಷ್ಟವಾದ ಉತ್ಪನ್ನದಡೆ ರೈತರನ್ನು ಒಂದುಗೂಡಿಸುವದು) ಸಂಯೋಜನೆ ಮತ್ತು ಸಮಾಲೋಚನೆ ನಡೆಸುವುದು ಮತ್ತು
- ತಾಲೂಕಿನ ಎಲ್ಲ ರೈತ ಆಸಕ್ತ ಗುಂಪುಗಳ ಮತ್ತು ಉತ್ಪನ್ನಗಳ ಆಸಕ್ತರ ಗುಂಪುಗಳ ಆವಿಷ್ಕಾರಗಳ ತಪಶೀಲು ತಯಾರಿಸುವದು (ಯಾದಿ ತಯಾರಿಸುವದು).

ಇದಲ್ಲದೇ ತಾಲೂಕ ತಂತ್ರಜ್ಞಾನ ವ್ಯವಸ್ಥಾಪಕರು (BTM) ತಾಲೂಕ ಅನುಷ್ಠಾನ ಸಮಿತಿ (TIC) **ಅನುಬಂಧ – I** (ಈ) ರಲ್ಲಿ ತಿಳಿಸಿರುವ ಕಾರ್ಯಗಳನ್ನು ಜಾರಿಗೊಳಿಸಲು ಸಹಾಯ ನೀಡುವದು.

(2) **ಕೃಷಿ ಮತ್ತು ಕೃಷಿಯೇತರ ವಿಸ್ತರಣಾ ಚಟುವಟಿಕೆಗಳನ್ನು ಆದ್ಯತೆಯ ಮೇರೆಗೆ ಕಾರ್ಯಗತಗೊಳಿಸಲು ತಾಲೂಕ ಮಟ್ಟದಲ್ಲಿ ಪ್ರತ್ಯೇಕವಾಗಿ ಪ್ರತಿ ತಾಲೂಕಿಗೆ ಇಬ್ಬರು ವಿಷಯ ತಜ್ಞರನ್ನು ಇರಿಸಲಾಗುವದು.** ಈ ತಜ್ಞರುಗಳ ಪರಿಣಿತ ವಿಷಯಗಳನ್ನು ವಿವಿಧ ತಾಲೂಕಗಳ ಆದ್ಯತೆಯ ಮೇರೆಗೆ ನಿರ್ದರಿಸಲಾಗುವದು. ವಿಷಯ ತಜ್ಞರುಗಳಿಗೆ ಕೆಳಕಂಡ ಕಾರ್ಯಗಳನ್ನು ಕೈಗೊಳ್ಳಲು ಅವಶ್ಯಕ ಸಂಪರ್ಕ ಮತ್ತು ಸಾರಿಗೆ ಸೌಲಭ್ಯಗಳನ್ನು ಕಲ್ಪಿಸಲಾಗುವದು.

- ಕೃಷಿ ಮತ್ತು ಕೃಷಿಯೇತರ ಇಲಾಖೆಗಳ ತಾಲೂಕ ಮಟ್ಟದ ಅಧಿಕಾರಿಗಳ ಮತ್ತು ತಾಲೂಕ ತಂತ್ರಜ್ಞಾನ ವ್ಯವಸ್ಥಾಪಕರ ಮುಖಾಂತರ ವಿಷಯ ತಜ್ಞರುಗಳು ಸಾಮಾನ್ಯ ಸೇವಾ ಕೇಂದ್ರಗಳಿಗೆ ಮತ್ತು ರೈತ ಕರೆ ಕೇಂದ್ರಗಳಿಗೆ ಅವಶ್ಯಕ ಮಾಹಿತಿಗಳನ್ನೊದಗಿಸುವರು.

- ತಾಲೂಕ ತಂತ್ರಜ್ಞಾನ ವ್ಯವಸ್ಥಾಪಕರ (BTM) ತಾಂತ್ರಿಕ ಸಹಾಯದೊಂದಿಗೆ ವಿಷಯ ತಜ್ಞರು ಕ್ಷೇತ್ರ ಪಾಠ ಶಾಲೆಗಳಿಗೆ, ರೈತ ಮಿತ್ರರಿಗೆ, ರೈತ ಗುಂಪುಗಳಿಗೆ ಮತ್ತು ಸಾಮಾನ್ಯವಾಗಿ ಎಲ್ಲ ರೈತರಿಗೆ ಅವಶ್ಯಕ ತಾಂತ್ರಿಕ ಕೃಷಿ ತಂತ್ರಜ್ಞಾನದ ಮಾಹಿತಿ ನೀಡುವರು.

ರಾಜ್ಯಗಳು ನಿರೂಪಿಸಿದ ನಿಯಮವಾಳಿಗಳನುಸಾರ ಅತ್ಮ ತಾಲೂಕ ತಂತ್ರಜ್ಞಾನ ವ್ಯವಸ್ಥಾಪಕರನ್ನು (BTM) ಮತ್ತು ತಾಲೂಕ ಮಟ್ಟದಲ್ಲಿಯ ವಿಷಯ ತಜ್ಞರನ್ನು ಗುತ್ತಿಗೆಯ ಆಧಾರದಮೇರೆಗೆ ಯೋಜನಾ ನಿರ್ದೇಶಕರು ನೇಮಕ ಮಾಡುವರು. ವಿಷಯ ತಜ್ಞರು ತಾಲೂಕ ತಂತ್ರಜ್ಞಾನ ವ್ಯವಸ್ಥಾಪಕರ (BTM) ಆಡಳಿತ ನಿಯಂತ್ರಣದಲ್ಲಿರುವರು. ತಾಲೂಕ ತಂತ್ರಜ್ಞಾನ ವ್ಯವಸ್ಥಾಪಕರು (BTM) ಅತ್ಮ ಯೋಜನಾ ನಿರ್ದೇಶಕರ ಆಡಳಿತ ನಿಯಂತ್ರಣದಲ್ಲಿ ಕಾರ್ಯ ನಿರ್ವಹಿಸುವರು. ಆದರೆ ಕೆಲ ರಾಜ್ಯಗಳಲ್ಲಿ ಕೃಷಿ ಮತ್ತು ಕೃಷಿಯೇತರ ಇಲಾಖೆಗಳ ಚಟುವಟಿಕೆಗಳನ್ನು ತಾಲೂಕ ಮಟ್ಟದಲ್ಲಿ ತಾಲೂಕ ಅಭಿವೃದ್ದಿ ಅಧಿಕಾರಿಯು ಸಂಯೋಜನೆ ಮಾಡುತ್ತಿದ್ದರೆ ಅಂತಹ ರಾಜ್ಯಗಳ ತಾಲೂಕ ತಂತ್ರಜ್ಞಾನ ವ್ಯವಸ್ಥಾಪಕರು (BTM) ಮತ್ತು ವಿಷಯ ತಜ್ಞರು ತಾಲೂಕ ಅಭಿವೃದ್ಧಿ ಅಧಿಕಾರಿಯ ಮುಖಾಂತರ ಅತ್ಮ ಯೋಜನಾ ನಿರ್ದೇಶಕರೊಂದಿಗೆ ಸಂಪರ್ಕ ಹೊಂದಿರಬಹುದು.

## 2.3. ಗ್ರಾಮ ಮಟ್ಟದಲ್ಲಿ ಆವಿಷ್ಕಾರಕ ಚಟುವಟಿಕೆಗಳ ಬೆಂಬಲ (ರೈತ ಮಿತ್ರ):

ಗ್ರಾಮ ಮಟ್ಟದಲ್ಲಿ ಕೇಂದ್ರ ಬಿಂದುವಾಗಿ ಕೆಲಸ ನಿರ್ವಹಿಸಲು ಗ್ರಾಮದ ಪ್ರಗತಿಪರ ರೈತರನ್ನು ಗುರುತಿಸುವದು ಹಾಗೂ ಒಂದುಗೂಡಿಸುವದು ಅತ್ಯವಶ್ಯಕ. ಈ ರೀತಿಯಾಗಿ ಗುರುತಿಸಲ್ಪಟ್ಟ ಪ್ರಗತಿಪರ ರೈತರನ್ನು ಪ್ರತಿ ಎರಡು ಹಳ್ಳಿಗಳಿಗೆ ಒಬ್ಬರಂತೆ ರೈತ ಮಿತ್ರರೆಂದು ಆಯ್ಕೆಮಾಡಲಾಗುವದು. ರೈತ ಮಿತ್ರರು ಅತ್ಯಾವಶ್ಯಕವಾದ ಗ್ರಾಮೀಣ ಆಧರಿತ ಕೆಳಮಟ್ಟದಿಂದ ಯೋಜನಾ ರಚನೆ ಹಾಗೂ ಗ್ರಾಮ ಮಟ್ಟದಲ್ಲಿ ವಿಸ್ತರಣಾ ವ್ಯವಸ್ಥೆ ಮತ್ತು ರೈತರೊಂದಿಗೆ ಸಂಪರ್ಕ ಕಲ್ಪಿಸುವಲ್ಲಿ ಪ್ರಮುಖ ಪಾತ್ರವಹಿಸುವರು. ರೈತ ಮಿತ್ರರು ಇತರೆ ರೈತರಿಗೆ ಮಾದರಿಯಾಗಿ ನಾಯಕತ್ವವಹಿಸುವರು. ಅವರು ಹೆಚ್ಚು ಮೇಲದರ್ಜೆಯ ಕೌಶಲ್ಯಗಳಿಂದ ಕೂಡಿದ್ದು ಗ್ರಾಮದಲ್ಲಿ ಇತರೆ ರೈತರಿಗೆ ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳಲ್ಲಿ ಸಲಹೆ ನೀಡಲು ಲಭ್ಯವಿರಬೇಕು. **ರೈತ ಮಿತ್ರರನ್ನು ತಾಲೂಕ ತಂತ್ರಜ್ಞಾನ ವ್ಯವಸ್ಥಾಪಕರು (BTM) ರೈತ ಆಸಕ್ತರ ಗುಂಪುಗಳ**

**ಸಂದರ್ಶನದ ಮೇಲೆ ಅವಲಂಬಿತ ಗ್ರಾಮ ಪಂಚಾಯತಿಯ ನಿರ್ಣಯದ ಮೇರೆಗೆ ಆಯಾ ಪಂಚಾಯತಿಯ ಅಧಿನದಲ್ಲಿ ಕೆಲಸ ನಿರ್ವಹಿಸಲು ನಿಯೋಜಿತಗೊಳಿಸುವರು.**

(1) ರೈತ ಮಿತ್ರರು ಯಾವುದೇ ಸಂಭಾವನೆಗೆ ಅರ್ಹರಿರುವದಿಲ್ಲ ಆದರೆ ಅವರಿಗೆ ವಿಶೇಷವಾದ ಕೌಶಲ್ಯ ಅಭಿವೃದ್ಧಿ ತರಬೇತಿಗಳನ್ನು, ಶೈಕ್ಷಣಿಕ ಪ್ರವಾಸಗಳನ್ನು ಮತ್ತು ವಿಶ್ವವಿದ್ಯಾಲಯಗಳಿಗೆ / ಇತರೆ ಸಂಸ್ಥೆಗಳಿಗೆ ಭೇಟಿಯ ಅವಕಾಶ ಕಲ್ಪಿಸಲಾಗುವದು. ಈ ಕಾರ್ಯಕ್ಕೆ ಪ್ರತಿ ರೈತ ಮಿತ್ರನಿಗೆ ಕೇಂದ್ರ ಸರಕಾರದಿಂದ ರೂ. 2000 ಗಳನ್ನು ಪ್ರತಿ ವರ್ಷ ಅನುಮೋದಿಸಲಾಗಿದೆ. ಇದಲ್ಲದೆ ರಾಜ್ಯ ಸರಕಾರವು ಸಮನಾದ ವಂತಿಕೆಯನ್ನು ನೀಡವುದರೊಂದಿಗೆ ಪ್ರತಿ ರೈತ ಮಿತ್ರನಿಗೆ ತಗಲುವ ವೆಚ್ಚಗಳಿಗೆ ಪ್ರತಿ ವರ್ಷ ಒಟ್ಟು ರೂ. 4000 ಬಳಸಲಾಗುವದು.

(2) ರೈತ ಪುರಷರು **ವಿವಿಧ ಕೃಷಿ ಚಟುವಟಿಕೆಗಳಲ್ಲಿ ತೊಡಗಿರುವದರಿಂದ ಹೆಚ್ಚಾಗಿ ಅವರು ಹಳ್ಳಿಗಳ ಹೊರಗಡೆ ಒಡಾಟದಲ್ಲಿರುತ್ತಾರೆ.** ಆದ್ದರಿಂದ ಹೆಚ್ಚು ಸಂಖ್ಯೆಯಲ್ಲಿ ರೈತ ಮಹಿಳೆಯರನ್ನು ರೈತಮಿತ್ರರನ್ನಾಗಿ ನೇಮಿಸಬಹುದು. ಇದರಿಂದ ಮಹಿಳಾ ರೈತಮಿತ್ರರು ಅನೇಕ ರೈತ ಮಹಿಳೆಯರನ್ನು ಸಂಪರ್ಕಿಸಲು ಮತ್ತು ತಲುಪಲು ಸಾಧ್ಯವಾಗುವದು.

# III ಕ್ಯಾಫಿಟೇರಿಯಾ ಚಟುವಟಿಕೆಗಳು

## 3.1 ಪರಿಷ್ಕೃತ ಅತ್ಮ ಕ್ಯಾಫಿಟೇರಿಯಾ:

ಕೆಲವು ಹೆಚ್ಚಿನ/ಹೊಸ ಚಟುವಟಿಕೆಗಳನ್ನು ಪರಿಷ್ಕೃತ ಅತ್ಮ ಕ್ಯಾಫಿಟೇರಿಯಾ ಚಟುವಟಿಕೆಗಳ ಪಟ್ಟಿಗೆ ಸೇರಿಸಲಾಗಿದೆ. ಈಗಿರುವ ಕೆಲವು ಆಯ್ದ ಪ್ರತಿ ಚಟುವಟಿಕೆಗೆ ಹೆಚ್ಚಿನ ಅನುದಾನದೊಂದಿಗೆ ಅವುಗಳನ್ನು ದಪ್ಪ ಅಕ್ಷರಗಳಲ್ಲಿ **ಅನುಬಂಧ - II** ರಲ್ಲಿ ನಮೂದಿಸಿದೆ. ಪರಿಷ್ಕೃತ ಅತ್ಮ ಕ್ಯಾಫಿಟೇರಿಯಾವನ್ನು **ಕ್ಯಾಫಿಟೇರಿಯಾ ಚಟುವಟಿಕೆಗಳು – 2010** ವೆಂದು ಮರುನಾಮಕರಣಗೊಳಿಸಲಾಗಿದೆ (**ಅನುಬಂಧ – II**). ಕ್ಯಾಫಿಟೇರಿಯಾವು ರಾಜ್ಯ, ಜಿಲ್ಲೆ ಮತ್ತು ತಾಲೂಕ ಮಟ್ಟದಲ್ಲಿ ಬೆಂಬಲ ನೀಡುವದಲ್ಲದೆ ಎಲ್ಲ ಹಂತದಲ್ಲಿ ವಿಶೇಷವಾದ ಆವಿಷ್ಕಾರಕ ಹೊಸ ಚಟುವಟಿಕೆಗಳಿಗೂ ಸಹ ಬೆಂಬಲಿಸುತ್ತದೆ.

### 3.1.1. ರಾಜ್ಯ ಮಟ್ಟದಲ್ಲಿ:

(1) **ಮೂಲ ಸೌಕರ್ಯಗಳ ಬೆಂಬಲ: ರಾಜ್ಯ ಮಟ್ಟದ ಚಟುವಟಿಕೆಗಳಿಗೆ ಬೆಂಬಲಿಸಲು ಸಮೇತಿಯಂತಹ ತರಬೇತಿ ಕೇಂದ್ರಗಳನ್ನು ಕೆಳಗೆ ತಿಳಿಸಿದ ಅನುದಾನ ಪರಿಮಿತಿಯಲ್ಲಿ ಮೇಲದರ್ಜೆಗೇರಿಸುವದು**

- 75 ಲಕ್ಷ ರೂಪಾಯಿ ಪ್ರತಿ ಸಮೇತಿಗೆ (100 ತಾಲೂಕಗಳಿಗಿಂತ ಕಡಿಮೆ ಇರುವ ರಾಜ್ಯಗಳ ಸಮೇತಿಗಳಿಗೆ)
- 100 ಲಕ್ಷ ರೂಪಾಯಿ ಪ್ರತಿ ಸಮೇತಿಗೆ (100 ರಿಂದ 400 ತಾಲೂಕಗಳಿರುವ ರಾಜ್ಯಗಳ ಸಮೇತಿಗಳಿಗೆ)
- 125 ಲಕ್ಷ ರೂಪಾಯಿ ಪ್ರತಿ ಸಮೇತಿಗೆ (400 ಕ್ಕಿಂತ ಹೆಚ್ಚು ತಾಲೂಕಗಳಿರುವ ರಾಜ್ಯಗಳ ಸಮೇತಿಗಳಿಗೆ)

**ಮೆಲ್ಕಾಣಿಸಿದ ಅನುದಾನವನ್ನು ಕಟ್ಟಡ ವ ವಿದ್ಯುತ್ ಸಂಪರ್ಕ ಮತ್ತು ಸಮೇತಿಗೆ ಅವಶ್ಯಕವಿರುವ ಇತರೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ನೀಡಲಾಗಿದೆ.** ಚಾಲನಾ ವೆಚ್ಚಗಳಿಗೆ / ವಾಹನ ಬಾಡಿಗೆಗೆ / ನಿಯಮಿತವಾಗಿ ಅಥವಾ ಅನಿಯಮಿತವಾಗಿ ಬಾಡಿಗೆ ಪಡೆದಿರುವ ವಾಹನಗಳಿಗೆ ಇಂಧನಕ್ಕೆ (ಎಣ್ಣೆಗಳು) ಮತ್ತು ಈಗಾಗಲೇ ಇರುವ ವಾಹನಗಳ ಇಂಧನಕ್ಕೆ ಸಾಕಷ್ಟು ಹಣಕಾಸಿನ ನೆರವು ನೀಡಿರುವದರಿಂದ ಸಮೇತಿಯಲ್ಲಿ ಯಾವುದೇ ಹೊಸ ವಾಹನಗಳ ಖರೀದಿಗೆ ಅವಕಾಶವಿರುವದಿಲ್ಲ.

**(2) ಮಾನವ ಸಂಪನ್ಮೂಲ ಅಭಿವೃದ್ದಿ:** ಸಮೇತಿಗಳ ಸಿಬ್ಬಂದಿಗಳಿಗೆ ನಿಯಮಿತವಾಗಿ ಸಾಮರ್ಥ್ಯ ಹೆಚ್ಚಿಸುವ ವಿಷಯಗಳಲ್ಲಿ ಅಗ್ರಸ್ಥಾನ ಹೊಂದಿದ ಸಂಸ್ಥೆಗಳಾದ ರಾಷ್ಟ್ರೀಯ ಕೃಷಿ ವಿಸ್ತರಣಾ ನಿರ್ವಹಣೆ ಸಂಸ್ಥೆ (MANAGE) ಮತ್ತು ಭಾರತೀಯ ಕೃಷಿ ಅನುಸಂಧಾನ ಪರಿಷತ್ತು (ICAR) ಗಳ ಸಹಯೋಗದೊಂದಿಗೆ, ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳ ಹಾಗೂ ಕೃಷಿ ಮತ್ತು ಸಹಕಾರ ಇಲಾಖೆಯಿಂದ ಬೆಂಬಲಿತ ವಿಸ್ತರಣಾ ಶಿಕ್ಷಣ ಸಂಸ್ಥೆಗಳ ಮುಖಾಂತರ ಅನೇಕ ಚಟುವಟಿಕೆಗಳನ್ನು ಕೈಗೊಳ್ಳುವದು. ಕೃಷಿ ಮತ್ತು ಕೃಷಿಯೇತರ ಇಲಾಖೆಯ ವಿವಿಧ ಹಂತದ ತಾಂತ್ರಿಕ ಸಿಬ್ಬಂದಿಗಳಿಗೆ ಸಾಮರ್ಥ್ಯ ಹೆಚ್ಚಿಸುವ ಕಾರ್ಯವನ್ನು ಸಮೇತಿಗಳು ಕೃಷಿ ವಿಶ್ವವಿದ್ಯಾಲಯಗಳ ಮತ್ತು ಕೃಷಿ ವಿಜ್ಞಾನ ಕೇಂದ್ರಗಳ ಸಹಯೋಗದೊಂದಿಗೆ ಕೈಗೊಳ್ಳುವದು. ಇದಲ್ಲದೆ, ಎಲ್ಲ ರಾಜ್ಯದ ಸಾರ್ವಜನಿಕ ವಲಯದ ಸಿಬ್ಬಂದಿಗಳಿಗೆ ಒಂದು ವರ್ಷದ "ಕೃಷಿ ವಿಸ್ತರಣಾ ನಿರ್ವಹಣೆ" ವಿಷಯದಲ್ಲಿ ಸ್ನಾತ್ತಕೋತ್ತರ ಡಿಪ್ಲೋಮಾ ಪದವಿಯನ್ನು ರಾಷ್ಟ್ರೀಯ ಕೃಷಿ ವಿಸ್ತರಣಾ

ನಿರ್ವಹಣೆ ಸಂಸ್ಥೆಯು (MANAGE) ಮುಕ್ತ ವಿಶ್ವವಿದ್ಯಾಲಯ ಮಾದರಿಯಲ್ಲಿ ನೀಡುತ್ತಿದೆ. ಯೋಜನೆಯಡಿ ಈ ಪದವಿಗೆ ಸಹಾಯ ಅನುದಾನವನ್ನು ಒದಗಿಸಲಾಗಿದೆ.

**(3) ಇತರೆ ಚಟುವಟಿಕೆಗಳು:** ಕ್ಯಾಫಿಟೇರಿಯಾವು ಕೃಷಿ ಪ್ರದರ್ಶನಗಳನ್ನು, ಪ್ರಾದೇಶೀಕ ಜಾತ್ರೆಗಳನ್ನು, ಕೃಷಿ ದರ್ಶನಗಳನ್ನು, ಪ್ರೋತ್ಸಾಹಧನ, ಸಹಾಯ ಹಾಗೂ ಸೌಲಭ್ಯಗಳನ್ನು, ರೈತರಿಗೆ ಪ್ರಶಸ್ತಿಗಳನ್ನು ಮತ್ತು ಪರಿವೀಕ್ಷಣೆ ಹಾಗೂ ಯೋಜನೆಯ ಪರಿಶೀಲನೆ ಕೈಗೊಳ್ಳಲು ಯೋಜನೆಯಡಿ ಸಹಾಯವನ್ನು ಒದಗಿಸುತ್ತದೆ.

### 3.1.2. ಜಿಲ್ಲಾ / ತಾಲೂಕ ಮಟ್ಟದಲ್ಲಿ:

**ಜಿಲ್ಲೆ/ ತಾಲೂಕ ಮಟ್ಟದ ಚಟುವಟಿಕೆಗಳನ್ನು** ಮೂರು ಗುಂಪುಗಳಾಗಿ ವಿಂಗಡಿಸಲಾಗಿದೆ.

(1) ರೈತರ ಉದ್ದೇಶಿತ ಚಟುವಟಿಕೆಗಳು

(2) ಕ್ಷೇತ್ರ ಮಾಹಿತಿ ಪ್ರಸಾರಣ

(3) ಸಂಶೋಧನೆ ï ವಿಸ್ತರಣೆ ï ರೈತರ ಸಂಪರ್ಕ

**ರೈತರ ಉದ್ದೇಶಿತ ಚಟುವಟಿಕೆಗಳು ವ್ಯವಸ್ಥಿತ ಸಂಶೋಧನೆ ಮತ್ತು ವಿಸ್ತರಣಾ ಯೋಜನೆ** (SREP) ಅಭಿವೃದ್ಧಿಗೊಳಿಸುವದು, ರೈತ ಗುಂಪುಗಳ ಚಾಲನೆಗೊಳಿಸುವದು, ತರಬೇತಿ, ಕ್ಷೇತ್ರ ದರ್ಶನ, ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳುವದು ಆಗಿದೆ. ಇವೆಲ್ಲವುಗಳು ರೈತರ ಸಬಲೀಕರಣ ಮತ್ತು ತಂತ್ರಜ್ಞಾನದ ಪ್ರಚಾರದಲ್ಲಿ ಅವರ ಭಾಗತ್ವವನ್ನು ಸುಧಾರಣೆಗೈಯುವುದಾಗಿದೆ. **ಕ್ಷೇತ್ರ ಮಾಹಿತಿ ಪ್ರಸಾರಣ ದಡಿಯಲ್ಲಿ** ಸ್ಥಳೀಯ ಕೃಷಿ ಪ್ರದರ್ಶನಗಳನ್ನು ಏರ್ಪಡಿಸುವದು, ಮುದ್ರಿತ ಹಸ್ತಪತ್ರಿಕೆಗಳ ಮುಖಾಂತರ ಮಾಹಿತಿ ಪ್ರಸಾರಗೈಯುವದು ಮತ್ತು ವಿದ್ಯುನ್ಮಾನದ ಮಾದ್ಯಮಗಳಲ್ಲಿ ತಂತ್ರಜ್ಞಾನದ ಕೈಪಿಡಿಗಳನ್ನು ತಯಾರಿಸುವದಾಗಿದೆ. **ಸಂಶೋಧನೆ – ವಿಸ್ತರಣೆ – ರೈತರ ಸಂಪರ್ಕ** ದಡಿಯಲ್ಲಿ ಸ್ಥಳೀಯ ರೈತರ ಮತ್ತು ವಿಜ್ಞಾನಿಗಳ ಸಂವಾದಗಳನ್ನು ಏರ್ಪಡಿಸುವದು, ಕ್ಷೇತ್ರೋತ್ಸವಗಳನ್ನು, ರೈತ ಗೋಷ್ಠಿಗಳನ್ನು ಏರ್ಪಡಿಸುವದು ಮತ್ತು SREP ಯಿಂದ ಹೊರಹೊಮ್ಮುವ ಸ್ಥಳೀಯವಾಗಿ ಸಂಶೋಧನೆಗೈಯುವ ವಿಷಯಗಳಿಗೆ ಬೆಂಬಲ ನೀಡುವುದು.

## 3.2. ಕ್ಯಾಫಿಟೇರಿಯಾ ಮಾರ್ಗದರ್ಶನಗಳು:

**3.2.1. ಅನುದಾನ ನಿಗದಿಗೊಳಿಸುವದು:** ಜಿಲ್ಲೆಯ ಒಟ್ಟು ಅನುದಾನದ ಶೇ. 55 ರಷ್ಟು ಸಂಪನ್ಮೂಲಗಳನ್ನು ರೈತ ಉದ್ದೇಶಿತ ಚಟುವಟಿಕೆಗಳಿಗೆ ಬಳಸುವದು; ಶೇ. 10 ರಷ್ಟು ಅನುದಾನವನ್ನು ಕ್ಷೇತ್ರ ಮಾಹಿತಿ ಪ್ರಸಾರಣ ಚಟುವಟಿಕೆಗಳಿಗೆ; ಶೇ. 7 ರಷ್ಟು ಅನುದಾನವನ್ನು ಸಂಶೋಧನೆ ï ವಿಸ್ತರಣೆ ï ರೈತರ ಸಂಪರ್ಕ ಚಟುವಟಿಕೆಗಳಿಗೆ ಮೀಸಲಾಗಿಸಿದೆ. ಜಿಲ್ಲೆ ಮತ್ತು ತಾಲೂಕ ಮಟ್ಟದಲ್ಲಿ ಆಡಳಿತ ವೆಚ್ಚ, ಪ್ರವಾಸ ಭತ್ಯೆ/ತುಟ್ಟಿ ಭತ್ಯೆ, ವಾಹನಗಳ ಬಾಡಿಗೆ, ಇಂಧನ, ಮತ್ತು ಇತರೆ ಚಾಲನಾ ವೆಚ್ಚಗಳು ಅನುದಾನದ ಶೇ. 28 ಕ್ಕಿಂತ ಹೆಚ್ಚಿಗೆಯಾಗಬಾರದು. ಆದರೆ ಶೇ. 28 ರ ಈ ಪರಿಮಿತಿಯು ಸಿಬ್ಬಂದಿಗಳ (ವಿಷಯ ತಜ್ಞರು ಮತ್ತು ಕಾರ್ಯಕರ್ತರು) ವೇತನ ಹೊರತುಪಡಿಸಿದ್ದು ಅದು **ಅನುಬಂಧ – III (ಅ)** ರಲ್ಲಿ ತಿಳಿಸಿದಂತೆ ಮೂಲ ನಿಯಮಗಳ ಪ್ರಕಾರವಿರುತ್ತದೆ. ರಾಜ್ಯಗಳು ಮಾನವ ಸಂಪನ್ಮೂಲದ ಆಯವ್ಯಯಗಳನ್ನು (ಮುಂಗಡ ಪತ್ರ) ನೇಮಕಾತಿ ಪದ್ದತಿ ಮತ್ತು ನೀಡಲಾಗುವ ಸಂಭಾವನೆಯ ಮೇರೆಗೆ ಲೆಕ್ಕಹಾಕಬೇಕು. **ಆಡಳಿತ ನಿರ್ವಹಣೆಯ ವೆಚ್ಚದಲ್ಲಿಯ**

**ಯಾವುದೇ ಉಳಿತಾಯವಾದ ಹಣವನ್ನು ಇತರೆ ವಿಭಾಗಗಳಿಗೆ ವರ್ಗಾಯಿಸಬಹುದು ಆದರೆ ತದ್ವಿರುದ್ದ ಸಾದ್ಯವಿಲ್ಲ.**

**3.2.2. ಪ್ರತಿ ಘಟಕದ ವೆಚ್ಚದ ಪರಿಮಿತಿ:** ಯೋಜನೆಯಡಿ ತಿಳಿಸಲಾದ ಮಾರ್ಗದರ್ಶನಗಳಿಗೆ ಬದ್ದರಾಗಿರಬೇಕು. ಆದರೆ ಕೆಲವು ವಿಶೇಷ ಸಂದರ್ಭಗಳಲ್ಲಿ ಅತ್ಮ ಚಾಲನಾ ಸಮಿತಿಯು ಆಂತರಿಕವಾಗಿ ಲಿಖಿತವಾದ ಕಾರಣಗಳನ್ನು ದಾಖಲಿಸುವದರ ಮೂಲಕ ಪರಿಮಿತಿಗೆ ಮೀರಿ ಪ್ರತಿ ಘಟಕಗಳ ವೆಚ್ಚವನ್ನು ಶೇ. 10 ರಷ್ಟು ಒಟ್ಟು ಅನುದಾನದಲ್ಲಿ ಯಾವುದೇ ಬದಲಾವಣೆಯಿಲ್ಲದೆ ಹೆಚ್ಚಿಸಬಹುದು. ಇಂತಹ ಎಲ್ಲ ಸಂಗತಿಗಳನ್ನು ಮುಂದಿನ ವರ್ಷದ ಕಾರ್ಯ ಯೋಜನೆಯಲ್ಲಿ ತಿಳಿಸಬೇಕು ಇದರಿಂದ ಸೂಕ್ತವಾದ ಸಲಹೆಗಳನ್ನು ನೀಡಲು ಸಹಾಯಕವಾಗವದು. ರಾಜ್ಯಗಳು ನಿಗದಿಪಡಿಸಿದ ಪರಿಮಿತಿಯ ಶೇ. 10 ಕ್ಕಿಂತ ಹೆಚ್ಚನ ಯಾವುದೆ ಮಾರ್ಗ ಬದಲಾವಣೆಯನ್ನು ಮತ್ತು ಕ್ಯಾಫಿಟೇರಿಯಾದಲ್ಲಿ ತಿಳಿಸದೇ ಇರುವ ಚಟುವಟಿಕೆಗಳನ್ನು ಕೃಷಿ ಮತ್ತು ಸಹಕಾರ ಇಲಾಖೆಯ ಪೂರ್ವಾಅನುಮತಿಯ ಮೇರೆಗೆ ಕೈಗೊಳ್ಳುವದು.

**3.2.3. ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನಕ್ಕೆ (ICT) ಬೆಂಬಲ, ಸಂಪರ್ಕ ಮತ್ತು ಸಂಚಾರ ಸೌಕರ್ಯ:** ಮಾರ್ಪಡಿಸಿದ ಅತ್ಮ ಕ್ಯಾಫಿಟೇರಿಯಾದಲ್ಲಿ ಮಾಹಿತಿ ಸಂಪರ್ಕ ಮತ್ತು ತಂತ್ರಜ್ಞಾನದ (ICT) ಬಳಕೆಗೆ ಹೆಚ್ಚು ಒತ್ತು ನೀಡಲಾಗಿದೆ. ರಾಜ್ಯ ಕೃಷಿ ವಿಶ್ವವಿದ್ಯಾಲಯಗಳ/ಕೃಷಿ ವಿಜ್ಞಾನ ಕೇಂದ್ರಗಳ (SAUs/KVKs), ತಾಲೂಕ ತಾಂತ್ರಿಕ ವ್ಯವಸ್ಥಾಪಕರು (BTMS), ಪರಿಣಿತರು ಮತ್ತು ತಾಲೂಕಗಳ ವಿಷಯ ತಜ್ಞರು ರೈತ ಮಿತ್ರರ, ರೈತ ಆಸಕ್ತ ಗುಂಪುಗಳ ಮತ್ತು ರೈತರಿಗೆ ಎದುರಾಗುವ ಪ್ರಮುಖ ವಿಷಯಗಳ ಬಗ್ಗೆ ಮಾಹಿತಿ ನೀಡಲು ಮೊಬೈಲ (ಸಂಚಾರ) ದೂರವಾಣಿಯಲ್ಲಿ ಲಭ್ಯವಿರುವರು. ರೈತರಿಗೆ ಹವಾಮಾನ ಮುನ್ಸೂಚನೆ, ರೋಗ ಮತ್ತು ಕೀಟಗಳ ಬಾಧೆ ಹಾಗೂ ಇತರೆ ಬೆಳೆ ಸಂಬಂಧಿತ ಪ್ರಮುಖ ವಿಷಯಗಳ ಮಾಹಿತಿಯನ್ನು ಮೊಬೈಲ ಸಂಪರ್ಕದಿಂದ ಕಳುಹಿಸುವದು. ಹತ್ತನೆಯ ಪಂಚವಾರ್ಷಿಕ ಯೋಜನೆಯಡಿ ಅತ್ಮ ಮತ್ತು ಸಮೇತಿಗಳಿಗೆ ಮೂಲ ಮಾಹಿತಿ ತಂತ್ರಜ್ಞಾನ ಸೌಲಭ್ಯಗಳನ್ನು ಒದಗಿಸಲಾಗಿದೆ. ಕೆಲವು ತಾಲೂಕಗಳಲ್ಲಿ ಕೃಷಿ ಸಂಪನ್ಮೂಲಗಳ ಸುಧಾರಣೆ ವ್ಯವಸ್ಥೆಯ ಸಂಪರ್ಕಜಾಲ (AGRISNET) ಮತ್ತು ಇತರೆ ಯೋಜನೆಗಳಡಿಯಲ್ಲಿ ಸಂಪರ್ಕ ಸಾಧನಗಳನ್ನು ಒದಗಿಸಲಾಗಿದೆ. ಈ ಸಾಧನಗಳನ್ನು ಸಂಪೂರ್ಣವಾಗಿ ವಿಸ್ತರಣಾ ಸಂಬಂಧಿತ ಚಟುವಟಿಕೆಗಳಿಗೆ ಬಳಸಲಾಗುವದು. ಹೊಸ ಅತ್ಮ ಮತ್ತು ಸಮೇತಿಗಳಲ್ಲಿ ಅವಶ್ಯಕವಾದ ಮಾಹಿತಿ ತಂತ್ರಜ್ಞಾನ ಮತ್ತು ಇತರೆ ಸಾಧನಗಳನ್ನು ಕೃಷಿ ಸಂಪನ್ಮೂಲಗಳ ಸುಧಾರಣೆ ವ್ಯವಸ್ಥೆಯ ಸಂಪರ್ಕಜಾಲ/ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (AGRISNET/RKVY) ಯೋಜನೆಗಳಡಿಯಲ್ಲಿ ಖರಿದಿಸಲಾಗುವದು. ಇದಲ್ಲದೆ ಈಗಾಗಲೇ ಅಸ್ತಿತ್ವದಲ್ಲಿರುವ ಸಮೇತಿಗಳ ಮತ್ತು ಅತ್ಮ ಗಳಲ್ಲಿ ಮಾಹಿತಿ ತಂತ್ರಜ್ಞಾನ ಸಾಧನಗಳಿಗೆ ಯೋಜನೆಯ ಮೂಲ ಅನುದಾನ ನೀಡಲಾಗಿದ್ದು ಅದನ್ನು ಬಳಸದೆ ಇದ್ದ ಪಕ್ಷದಲ್ಲಿ ಹೊಸದಾಗಿ ಕೃಷಿ ಸಂಪನ್ಮೂಲಗಳ ಸುಧಾರಣೆ ವ್ಯವಸ್ಥೆಯ ಸಂಪರ್ಕಜಾಲ (AGRISNET) ಯೋಜನೆಯಲ್ಲಿ ಅನುಮೋದನೆ ನೀಡಲಾದ ಪ್ರತಿ ಘಟಕ ವೆಚ್ಚದ ದರದಲ್ಲಿ ಮಾಹಿತಿ ತಂತ್ರಜ್ಞಾನ ಸಾಧನಗಳನ್ನು ಖರೀದಿ ಮಾಡುವದು. **ಸಮೇತಿಗಳ ವರ್ಗ, ಅತ್ಮ ಅಧಿಕಾರಿಗಳು, ತಾಲೂಕ ತಂತ್ರಜ್ಞಾನ ವ್ಯವಸ್ಥಾಪಕರು (BTMs) ಮತ್ತು ವಿಷಯ ತಜ್ಞರು (SMSs) ಸಂಚಾರ ಸೌಕರ್ಯ ಹೊಂದಿದ್ದು, ಮೊಬೈಲ ದೂರವಾಣಿಯ ಮುಖಾಂತರ ತಮ್ಮ ಕಾರ್ಯವ್ಯಾಪ್ತಿಯ ಪ್ರದೇಶದಲ್ಲಿ ಸಂಪರ್ಕದಲ್ಲಿರಬೇಕಾಗುವದು. ಅವರೆಲ್ಲರೂ ತಮ್ಮ ಮೊಬೈಲ ದೂರವಾಣಿಯಲ್ಲಿ ಲಭ್ಯವಿರಬೇಕು.** ತಾಲೂಕ ತಂತ್ರಜ್ಞಾನ ವ್ಯವಸ್ಥಾಪಕರ (BTMs) ಮತ್ತು ವಿಷಯ

ತಜ್ಞರ SMSs ಸುಗಮವಾದ ಸಂಚಾರ ಮತ್ತು ಸಂಪರ್ಕ ನಿಶ್ಚಿತಗೊಳಿಸಲು ವಿಶೇಷ ಅನುದಾನ ಅವಕಾಶ ಕಲ್ಪಿಸಲಾಗಿದೆ.

## 3.3. ಕ್ಷೇತ್ರ ಪಾಠ ಶಾಲೆಗಳು:

ಕ್ಷೇತ್ರ ಪಾಠಶಾಲೆಗಳು ಪ್ರಗತಿಪರ/ವಿಶೇಷ ಸಾಧನೆಗೈದ ರೈತರ ಮತ್ತು ಗ್ರಾಮದ ಇತರ ರೈತರ ಮದ್ಯ ಪ್ರಮುಖವಾದ ನಿಕಟ ಸಂಪರ್ಕವನ್ನು ಒದಗಿಸುತ್ತವೆ. ಇಂತಹ ರೈತರನ್ನು ಅದ್ಯಾಯ 4.1.2. ರಲ್ಲಿ ತಿಳಿಸಿರುವ ವಿಧಾನವನ್ನು ಅನುಸರಿಸಿ ವ್ಯಾಪಕವಾಗಿ ಹಾಗೂ ಪಾರದರ್ಶಕವಾಗಿ ಆಯ್ಕೆ ಮಾಡಬೇಕು. ಇಂತಹ ರೈತರು ಸಾಮಾನ್ಯವಾಗಿ ಇತರೆ ರೈತರಿಂದ ತಂತ್ರಜ್ಞಾನಗಳ ಅಳವಡಿಕೆ, ಇಳುವರಿಯಲ್ಲಿ ಹೆಚ್ಚಳ ಮತ್ತು ಕೃಷಿ ಹಾಗೂ ಕೃಷಿಯೇತರ ಚಟುವಟಿಕೆಗಳಿಂದ ಬರುವ ಉತ್ಪನ್ನಗಳ ಆಧಾರದ ಮೇರೆಗೆ ವಿಶೇಷ ಸಾಧನೆಗೈದ ರೈತರೆಂದು ಮನ್ನಣೆ ಪಡೆದಿರಬೇಕು. ಕ್ಷೇತ್ರ ಪಾಠ ಶಾಲೆಗೆ ಸಂಬಂದಿತ ಕೆಲವು ಪ್ರಮುಖ ಮಾಹಿತಿಗಳನ್ನು ಅತ್ಮ ಕ್ಯಾಫಿಟೇರಿಯಾದ 2010 ರ ಅನುಬಂಧ – I ರಲ್ಲಿ ತಿಳಿಸಿದೆ. ಕ್ಷೇತ್ರ ಪಾಠ ಶಾಲೆಗಳ ಚಾಲನೆಯ ವೆಚ್ಚ ನಿಬಂಧನೆಗಳನ್ನು ಅನುಬಂಧ – II ರಲ್ಲಿ ವಿಶ್ಲೇಶಿಸಲಾಗಿದೆ. ಪ್ರತಿಯೊಂದ ವಿಷಯಕ್ಕೆ ಅನುಗುಣವಾಗಿ ನಿಗದಿಪಡಿಸಿದ ಪರಿಮಿತಿಗೆ ಬದ್ಧರಾಗಿರಬೇಕು.

## 3.4. ಉತ್ಪನ್ನ ಆಸಕ್ತರ ಗುಂಪುಗಳ ರಚನೆ:

1. ಎಲ್ಲ ಪ್ರಮುಖ ಕೃಷಿ ಉತ್ಪನ್ನಗಳಿಗೆ ಉತ್ಪನ್ನ ಆಸಕ್ತರ ಗುಂಪುಗಳ ಸಂಘಟನೆ ಹಾಗೂ ರಚನೆಗೆ ಪ್ರೋತ್ಸಾಹ ಹಾಗೂ ಒತ್ತು ನೀಡುವದು (ಗಾತ್ರ  20 - 25 ರೈತರು).
2. ರೈತ ಆಸಕ್ತ ಗುಂಪುಗಳ/ ಉತ್ಪನ್ನ ಆಸಕ್ತರ ಗುಂಪುಗಳ **(FIG/CIG)** ಸದಸ್ಯರು ಚಟುವಟಿಕೆಗಳ ಬಗ್ಗೆ ಚರ್ಚಿಸಲು ಮತ್ತು ಮುಂದಿನ ಕಾರ್ಯ ಯೋಜನೆಯ ತಯಾರಿಸಲು ಪ್ರತಿ ತಿಂಗಳಿಗೆ ಒಂದು ಬಾರಿ ಒಂದಡೆ ಸಭೆ ಸ್ಥೆರುವುದು.
3. ತಾಲೂಕ ಅನುಷ್ಠಾನ ಸಮಿತಿ **(TIC)** ಮತ್ತು ತಾಲೂಕ ರೈತರ ಸಲಹಾ ಸಮೀತಿ **(BFAC)** ಗಳು ನಿಯಮಿತವಾಗಿ ಎಲ್ಲ ಉತ್ಪನ್ನ ಆಸಕ್ತರ ಗುಂಪುಗಳ **(CIGs)** ಕಾರ್ಯವನ್ನು ನಿಯಮಿತವಾಗಿ ವೀಕ್ಷಣೆ ಮಾಡುವರು.
4. ಗ್ರಾಮಮಟ್ಟದ ಉತ್ಪನ್ನ ಆಸಕ್ತರ ಗುಂಪುಗಳನ್ನು **(CIG)** ತಾಲೂಕ ಮಟ್ಟದಲ್ಲಿ ನಂತರ ಜಿಲ್ಲಾ ಮಟ್ಟದಲ್ಲಿಯೂ ಒಕ್ಕೂಟಗೊಳಿಸುವುದು.
5. ಉತ್ಪನ್ನ ಆಸಕ್ತರ ಗುಂಪುಗಳು (**CIG**) ಸರಿಯಾದ ಮತ್ತು ಸೂಕ್ತವಾದ ನೋಂದಣಿ ಮತ್ತು ದಾಖಲೆಗಳನ್ನು ಪಾಲಿಸಬೇಕು (ಉತ್ಪನ್ನಗಳ/ನಡಾವಳಿ/ಉಳಿತಾಯಗಳು/ಖಾತೆಗಳು).

# IV. ಇತರೆ ಕಾರ್ಯಕಾರಿ ವಿಷಯಗಳು

## 4.1. ಇತರೆ ಕಾರ್ಯಕಾರಿ ವಿಷಯಗಳು

**4.1.1. ಕಾರ್ಯವ್ಯಾಪ್ತಿ ಪ್ರದೇಶ:** ಪರಿಷ್ಕೃತ ಯೋಜನೆಯನ್ನು ವಿಶ್ವ ಬ್ಯಾಂಕ್ ನೆರವಿನ ವ್ಯಾಪ್ತಿಯಲ್ಲಿರುವ ಅಸ್ಸಾಂ ರಾಜ್ಯದ 12 ಜಿಲ್ಲೆಗಳನ್ನು ಹೊರತುಪಡಿಸಿ ದೇಶದ ಎಲ್ಲ ಗ್ರಾಮೀಣ ಜಿಲ್ಲೆಗಳಲ್ಲಿ ಜಾರಿಗೊಳಿಸಲಾಗುವದು. ಈ 12 ಜಿಲ್ಲೆಗಳನ್ನೂ ಸಹ ವಿಶ್ವ ಬ್ಯಾಂಕ್ ನೆರವು ಮುಕ್ತಾಯಗೊಂಡ ನಂತರ ಯೋಜನೆಗೆಒಳಪಡಿಸಲಾಗುವದು.

**4.1.2. ಫಲಾನುಭವಿಗಳ ಆಯ್ಕೆ:**

(1) ಕ್ಯಾಫಿಟೇರಿಯಾ ಚಟುವಟಿಕೆಗಳು ಕೆಲವು ವೈಯಕ್ತಿಕವಾಗಿ ಲಾಭದಾಯಕವಾಗುವ ನಿಟ್ಟಿನ ಅಂಶಗಳನ್ನು ಸಹ ಹೊಂದಿವೆ. (ತರಬೇತಿ, ಪ್ರಾತ್ಯಕ್ಷಿಕೆ, ರೈತ ಪಾಠ ಶಾಲೆಗಳು, ರೈತ ï ವಿಜ್ಞಾನಿಗಳ ಸಂವಾದ ಮತ್ತು ಕ್ಷೇತ್ರ ದರ್ಶನಗಳು) ಕ್ಯಾಫಿಟೇರಿಯಾದಿಂದ ಆಯ್ಕೆಮಾಡಿದ ಅಂತಹ ಚಟುವಟಿಕೆಗಳ ಸಾರಾಂಶವನ್ನು ಅನುಬಂಧ – IV ರಲ್ಲಿ ನೀಡಲಾಗಿದೆ.

(2) **ಪಾರದರ್ಶಕತೆ ಮತ್ತು ಉದ್ದೇಶಗಳಿಗನುಗುಣವಾಗಿ ಫಲಾನುಭವಿಗಳ ಆಯ್ಕೇಮಾಡುವದು ಹೆಚ್ಚು ಪ್ರಾಶಸ್ಥತೆಯಿಂದ ಕೂಡಿದ್ದು ಯೋಜನೆಯಲ್ಲಿ ರೈತರ ಅತ್ಮಬಲ ಹೆಚ್ಚಿಸುವದಲ್ಲದೆ ವಿಸ್ತರಣಾ ಸೇವೆಗಳ ಲಾಭವು ಸಮಾಜದ ಎಲ್ಲ ವರ್ಗಗಳಿಗೆ ತಲುಪುವಂತೆ ಖಚಿತಪಡಿಸುವದು.** ಆದ್ದರಿಂದ ಫಲಾನುಭವಿಗಳನ್ನು ಈ ಕೆಳಗೆ ತಿಳಿಸಿದ ರೀತಿಯಲ್ಲಿ ಆಯ್ಕೆಮಾಡಬೇಕು.

- **ಸಾದ್ಯವಾದಷ್ಟು ಪ್ರತಿ ತಾಲೂಕಿನ ಎಲ್ಲ ಪಂಚಾಯತಿಗಳನ್ನು ಆವರ್ತ ಪದ್ಧತಿಯ ಆಧಾರದಮೇರೆಗೆ ವಿವಿಧ ಅಂಶಗಳ ಪ್ರಕಾರ ಯೋಜನೆಗೊಳಪಡಿಸಬೇಕು. ಒಂದು ವರ್ಷದಲ್ಲಿ ಒಳಗೊಳ್ಳಬೇಕಾದ/ಭಾಗವಹಿಸಬೇಕಾದ (ಆವರಿಸಬೇಕಾದ) ಪಂಚಾಯತಿಗಳನ್ನು ತಾಲೂಕ ಅನುಷ್ಠಾನ ಸಮಿತಿ (TIC) ತಾಲೂಕ ರೈತರ ಸಲಹಾ ಸಮಿತಿಯ (BFAC) ಸಂದರ್ಶನದ ಮೇರೆಗೆ ನಿರ್ಧರಿಸಬೇಕು.** ಆದರೆ, ಕೆಲವು ವಿಶೇಷ ಸಂದರ್ಭಗಳಲ್ಲಿ ಪ್ರದೇಶ ಸೀಮಿತ ಯೋಜನೆಗಳಿದ್ದರೆ ಸಮಾನತೆಯ ಬಾಂಧವ್ಯಮೂಡಿಸಲು ಅಥವಾ ಆಡಳಿತಾತ್ಮಕ ಹಸ್ತಕ್ಷೇಪಗಳಿದ್ದಲ್ಲಿ ಲಿಖಿತವಾಗಿ ದಾಖಲಿಸಿ ಅವುಗಳಿಗೂ ಆದ್ಯತೆ ನೀಡಿ, ಮುಂದಿನ ಕ್ರಮಕ್ಕೆ ಅತ್ಮಕ್ಕೆ ರವಾನಿಸುವದು.

- ತಾಲೂಕ ಅನುಷ್ಠಾನ ಸಮಿತಿ (TIC) ತಾಲೂಕ ರೈತರ ಸಲಹಾ ಸಮಿತಿಯ (BFAC) ಸಂದರ್ಶನದಮೇರೆಗೆ ಫಲಾನುಭವಿಗಳ ಸಂಖ್ಯೆಯನ್ನು ನಿರ್ಧರಿಸಲು, ಪರಿಶಿಷ್ಟ ಜಾತಿ ಮತ್ತು ಪಂಗಡಗಳು ಹಾಗೂ ಇತರೆ ವರ್ಗಗಳು ಸಮತೋಲನವಾಗಿ ಬಿಂಬಿಸಲು ಅಂತಿಮವಾಗಿ ಆಯ್ಕೆಯಾದ ಪಂಚಾಯತಿಗಳಲ್ಲಿಯ ಯಾದಿಯಿಂದ ಫಲಾನುಭವಿಗಳ ಪಟ್ಟಿಯನ್ನು ತಯಾರಿಸುವದು.

- ಕನಿಷ್ಟ ಶೇ. 50 ರಷ್ಟು ಫಲಾನುಭವಿಗಳು ಸಣ್ಣ ಮತ್ತು ಅತಿಸಣ್ಣ ರೈತರು ಮತ್ತು ಶೇ. 30 ರಷ್ಟು ಫಲಾನುಭವಿಗಳು ರೈತ ಮಹಿಳೆಯರು/ಮಹಿಳಾ ರೈತರಾಗಿರಬೇಕು.

- **ಪ್ರಾತ್ಯಕ್ಷಿಕೆಗಳ ಕೈಗೊಳ್ಳಲು ಆರಿಸಿದ ರೈತರ, ಅಂತರ ಜಿಲ್ಲೆ ಮತ್ತು ಅಂತರ ರಾಜ್ಯ ತರಬೇತಿಗಳ ವಯಕ್ತಿಕ ಫಲಾನುಭವಿಗಳ ಮತ್ತು ಎಲ್ಲ ರೈತ ಗುಂಪುಗಳ ಫಲಾನುಭವಿಗಳ ಆಯ್ಕೆಯನ್ನು ಆಯಾ ಗ್ರಾಮ ಸಭೆಗಳು ಅಥವಾ ಗ್ರಾಮ ಪಂಚಾಯತಿಗಳು ತಮ್ಮ ಪ್ರದೇಶಗಳಲ್ಲಿಯ ರೈತರ ಆಸಕ್ತ ಗುಂಪುಗಳ (FIGs) ಮತ್ತು ರೈತ ಸಂಘಗಳ (Fos) ಸಂದರ್ಶನದಮೇರೆಗೆ ರಾಜ್ಯ ಸರಕಾರದ ನಿರ್ಧಾರದಂತೆ ಆಯ್ಕೆ ಮಾಡುವವು.** ಆದರೆ ಕೆಲ ಕಾರಣಗಳಿಂದಾಗಿ ಫಲಾನುಭವಿಗಳ ಯಾದಿಯನ್ನು ಮೇಲೆ ತಿಳಿಸಿದಂತೆ ನಿರ್ಧಾರಿತ ಸಮಯದಲ್ಲಿ ತಯಾರಿಸದಿದ್ದಲ್ಲಿ ತಾಲೂಕ ರೈತರ ಸಲಹಾ ಸಮಿತಿಯು (BFAC) ತಾಲೂಕ ಮಟ್ಟದ ಅನುಷ್ಠಾನ ಸಮಿತಿ (TIC) ರೈತರ ಆಸಕ್ತ ಗುಂಪುಗಳ (FIGs) ಮತ್ತು ರೈತ ಸಂಘಗಳ (Fos) ಸಂದರ್ಶನದಮೇರೆಗೆ ತಾಲೂಕ ತಂತ್ರಜ್ಞಾನ ವ್ಯವಸ್ಥಾಪಕರ (BTM) ಮುಖಾಂತರ ಯೋಜನೆಯಡಿಯ ವಿವಿಧ ಚಟುವಟಿಕೆಗಳ ಫಲಾನುಭವಿಗಳನ್ನು ಆಯ್ಕೆಮಾಡುವದು.

(TIC) **ಯು BFAC ಯ ಸಂದರ್ಶನದ ಮೇರೆಗೆ ಪಂಚಾಯತಿಗಳ, ಹಳ್ಳಿಗಳ, ಚಟುವಟಿಕೆಗಳ ಸಂಖ್ಯೆಗಳನ್ನು ಮತ್ತು ವಿವಿಧ ವರ್ಗಗಳ ಅಭ್ಯರ್ಥಿಗಳ ಸಂಖ್ಯೆಯನ್ನು ನಿರ್ಧರಿಸುವದು.**

ಫಲಾನಿಭವಿಗಳ ಪಟ್ಟಿ ನಿಗದಿತ ಸಮಯದಲ್ಲಿ ತಯಾರಾಗದಿದ್ದರೆ BFAC ಯು FIGs & FOs ಗಳ ಸಲಹೆಯ ಮೇರೆಗೆ ಫಲಾನುಭವಿಗಳನ್ನು ಆಯ್ಕೆ ಮಾಡುವದು.

**ಗ್ರಾಮ ಸಭೆಗಳು ಅಥವಾ ಗ್ರಾಮ ಪಂಚಾಯತಿಗಳು FIGs/Fos ಸಲಹೆಯ ಮೇರೆಗೆ ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸುವ ರೈತರನ್ನು ಆಯ್ಕೆಮಾಡಿ ಪಟ್ಟಿಯನ್ನು TIC ಗೆ ಕಳುಹಿಸುವದು.**

- ಪಾರದರ್ಶಕತೆಯಿಂದ ವಿವಿಧ ಹಂತಗಳಲ್ಲಿ ಪುರಸ್ಕಾರ ಮತ್ತು ಪ್ರೋತ್ಸಾಹಗಳಿಗೆ ರಾಜ್ಯಗಳು ಫಲಾನುಭವಿಗಳನ್ನು ಪ್ರಚಲಿತವಿರುವ ವಿಧಾನಗಳನ್ನು ಅನುಸರಿಸಿ ಅಥವಾ ಸೂಕ್ತವೆನಿಸಿದ ಮಾರ್ಗದನುಸಾರ ಗುರುತಿಸುವದು.

**ಯಾವುದೆ ರೈತನು ಒಂದೆ ಬಗೆಯ ಎರಡು ಪ್ರಯೋಜನೆಗಳನ್ನು ಬೇರೆಬೇರೆ ಯೋಜನೆಗಳಡಿಯಲ್ಲಿ ಪಡೆಯದಂತೆ ನೋಡಿಕೊಳ್ಳಬೇಕು.**

**4.1.3. ಅತ್ಮ ಕ್ಯಾಫಿಟೇರಿಯಾ 2010 ಕ್ಕೆ ಸಂಬಂಧಿಸಿದ ಸಾಮಾನ್ಯ ವಿಷಯಗಳು (ಅನುಬಂಧ – II):**

1. ರಾಜ್ಯ ಮಟ್ಟದಲ್ಲಿ ನಿರ್ಣಯಿಸಲಾದ ಕ್ಯಾಫಿಟೇರಿಯಾದಲ್ಲಿ ಪಟ್ಟಿಮಾಡಿದ ನಾಲ್ಕು ಚಟುವಟಿಕೆಗಳಾದ ರೈತರ ತರಬೇತಿಗಳು (B-2); ಪ್ರಾತ್ಯಕ್ಷಿಕೆಗಳು (B-3); ಕ್ಷೇತ್ರ ದರ್ಶನಗಳು(B-4); ಮತ್ತು ರೈತ ಗುಂಪುಗಳ ಬಲವರ್ಧನೆ (B-5) ಚಟುವಟಿಕೆಗಳಿಗೆ ಫಲಾನುಭವಿಗಳು ಕನಿಷ್ಟ ಶೇ. ೧೦ ರಷ್ಟು ನೆರವು ಭರಿಸಬೇಕು. **ಆದರೆ ಪರಿಶಿಷ್ಟ ಜಾತಿ ಮತ್ತು ಪಂಗಡ (SC&ST), ಮತ್ತು ಮಹಿಳಾ ಫಲಾನುಭವಿಗಳು ಮತ್ತು ಈಶಾನ್ಯ ಮತ್ತು ಗುಡ್ಡಗಾಡು ರಾಜ್ಯಗಳ ಫಲಾನುಭವಿಗಳು ಶೇ. ೫ ರಷ್ಟು ನೆರವು ಮಾತ್ರ ಭರಿಸಬೇಕು.**

2. ಕಾರ್ಯಕ್ರಮಗಳಿಗೆ ಹಾಗೂ ಚಟುವಟಿಕೆಗಳಿಗೆ ನಿಗದಿಪಡಿಸಿದ ಕನಿಷ್ಟ ಶೇ. 30 ರಷ್ಟು ಸಂಪನ್ಮೂಲಗಳನ್ನು ರೈತ ಮಹಿಳೆಯರಿಗೆ ಮತ್ತು ಮಹಿಳಾ ವಿಸ್ತರಣಾ ಕಾರ್ಯಕರ್ತರಿಗೆ ನೀಡುವದು.

3. ಯಾವುದೇ ಅನರ್ಹ ವಿಷಯಗಳಿಗೆ ವಿಸ್ತರಣಾ ಕಾರ್ಯ ಯೋಜನೆಯ ಅನುದಾನವನ್ನು ಖರ್ಚುಗೊಳಿಸುವಂತಿಲ್ಲ. ಅಂತಹ ಖರ್ಚುಗಳಾದ ಸಂದರ್ಬಗಳಲ್ಲಿ ಅನರ್ಹ ವೆಚ್ಚಗಳನ್ನು ರಾಜ್ಯ ಅನುದಾನದಿಂದ ಮುಂದಿನ ವಾರ್ಷಿಕದಲ್ಲಿ ಕಡಿತಗೊಳಿಸಲಾಗುವದು.

4. ಅನುಕ್ರಮ ಸಂಖ್ಯೆ A.8 (b) ರಲ್ಲಿಯ ಕಾರ್ಯಕಾರಿ ವೆಚ್ಚಗಳು ರಾಜ್ಯ ಮಟ್ಟದ ಚಟುವಟಿಕೆಗಳಡಿ, ಅನುಕ್ರಮ ಸಂಖ್ಯೆ B.14 ರಲ್ಲಿಯ ವೆಚ್ಚಗಳು ಜಿಲ್ಲಾ ಮತ್ತು ತಾಲೂಕ ಮಟ್ಟದ ಚಟುವಟಿಕೆಗಳಡಿ ಹಾಗೂ ಅನುಕ್ರಮ ಸಂಖ್ಯೆ D.1 ರಲ್ಲಿ ಆವಿಷ್ಕಾರಕ ಚಟುವಟಿಕೆಗಳು ತಾಂತ್ರಿಕ ಸಹಾಯ, ಸಂದರ್ಶನಗಳು, ವಿಶೇಷ ಅಧ್ಯಯನಗಳು, ಕಾರ್ಯಾಗಾರಗಳು, ಗ್ರಂಥಾಲಯ, ಅಂತರಜಾಲ, ದೂರವಾಣಿ, ಮತ್ತು ತಾಲೂಕ ಅನುಷ್ಠಾನ ಸಮಿತಿ - ರೈತರ ಸಲಹಾ ಸಮಿತಿಗಳ (TIC- FAC) ಸಭೆಗಳ ಹಾಗೂ ವಸತಿಗಳ ವೆಚ್ಚಗಳನ್ನೊಳಗೊಂಡಿವೆ. ವಾಹನಗಳ ಬಾಡಿಗೆ ವೆಚ್ಚ, ಇಂಧನ ಮತ್ತು ರೈತರ ಸಲಹಾ ಸಮಿತಿಗಳ (FAC) ಸಭೆಗಳಂತಹ ವೆಚ್ಚಗಳನ್ನೂ ಸಹ ಕಾರ್ಯಕಾರಿ ವೆಚ್ಚಗಳಲ್ಲಿ ಭರಿಸಬಹುದು.

5. ಅತ್ಮ ಕ್ಯಾಫಿಟೇರಿಯಾದಲ್ಲಿ ನಮೂದಿಸದೇ ಇರುವ ಉಪ ವಿವರಣೆಗಳಾದ ಪ್ರಾತ್ಯಕ್ಷಿಕೆಗಳು, ತರಬೇತಿಗಳು ಮತ್ತು ಕ್ಷೇತ್ರ ದರ್ಶನಗಳು ರಾಜ್ಯ ಸರಕಾರಗಳ ಯೋಜನೆಗಳಡಿ ಒಪ್ಪಿಗೆ ನೀಡಿರುವಂತೆ ಇರುವವು. ಇಲ್ಲವಾದಲ್ಲಿ, ಅಂತರ ಇಲಾಖೆಗಳ ಕಾರ್ಯ ತಂಡದ (IDWG) ಪೂರ್ವಾನುಮತಿಯನ್ನು ಪಡೆಯುವದು.

6. **ಕೆಲವು ನಿರ್ಬಂಧಗೊಳಿಸುವ ಪರಿಸ್ಥಿತಿಗಳು ತಲೆದೋರಿದಾಗ ಅಥವಾ ರಾಜ್ಯಗಳು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (RKVY) ಯಡಿ ಅನುದಾನಕ್ಕೆ ಅರ್ಹವಿಲ್ಲದಿದ್ದಾಗ ರಾಜ್ಯಮಟ್ಟದಲ್ಲಿ RKVY ಯೋಜನೆಗಳನ್ನು ಪರಿಗಣಿಸಲು ಸ್ಥಾಪಿತ ರಾಜ್ಯ ಮಟ್ಟದ ಮಂಜೂರಾತಿ ಸಮಿತಿಯು (SLSC) ಯೋಜನೆಗಳನ್ನು ಪರಿಗಣಿಸಿ SEWP ಅನ್ನು ಅನುಮೋದಿಸುವುದು ಮತ್ತು ನಿಯಮಿತ ಮೇಲ್ವಿಚಾರಣೆ ನಡೆಸುವದು.** ಕೆಲವು ಅಸಂದರ್ಭಿಕ ಪರಸ್ಥಿತಿಗಳಲ್ಲಿ ಪ್ರಸ್ತುತ ಜಾರಿಯಲ್ಲಿರುವ ರಾಜ್ಯ ಮಟ್ಟದ ಅಂತರ ಇಲಾಖೆಗಳ ಕಾರ್ಯ ತಂಡ (IDWG) ಮತ್ತು ಕೃಷಿ ಮತ್ತು ಸಹಕಾರ ಇಲಾಖೆ (DAC) ಯ ತಾಂತ್ರಿಕ ಸಮಿತಿಯ ಮುಖಾಂತರ ರಾಜ್ಯ ವಿಸ್ತರಣಾ ಕ್ರಿಯಾ ಯೋಜನೆಯನ್ನು (SEWP) ಅನುಮೋದಿಸುವ ಪದ್ದತಿಯ ಅನುಕರಣೆ ಜಾರಿಯಲ್ಲಿರುವುದು. ರಾಜ್ಯ ಮಟ್ಟದ ಅಂತರ ಇಲಾಖೆಗಳ ಕಾರ್ಯ ತಂಡ (IDWG) ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು ಇವರ ನೇತೃತ್ವದಲ್ಲಿ ವಿಸ್ತರಣಾ ಸುಧಾರಣೆಗಳನ್ನು

ನಿಗದಿಪಡಿಸಿ ಮಾರ್ಗದರ್ಶನಗಳ ಅನುಸಾರ ಅನುಷ್ಠಾನಗೊಳಿಸಲು ಯೋಜನೆಯ ಮೇಲ್ವಿಚಾರಣೆಯನ್ನು ನಡೆಸುವುದು.

7. ಜಿಲ್ಲೆಗಳ ಒಟ್ಟು ಮಳೆಯಾಶ್ರಿತ ಪ್ರದೇಶದ ಅನುಪಾತಕ್ಕೆ ತಕ್ಕಂತೆ ಯೋಜನೆಯ ಕಾರ್ಯಕ್ರಮಗಳಿಗೆ ಅನುದಾನವನ್ನೂ ಸಹ ಆ ಪ್ರದೇಶಗಳ ಅನುಪಾತಕ್ಕನುಗುಣವಾಗಿ ವೆಚ್ಚ ಮಾಡುವದು.

8. ರಾಜ್ಯ ಸರಕಾರಗಳಿಗೆ ಕೃಷಿ ಮತ್ತು ರೈತರ ಅಭಿವೃದ್ಧಿ ಕಾರ್ಯಾಗಾರಗಳನ್ನು ಹಾಗೂ ಪ್ರದರ್ಶನಗಳನ್ನು ಕೈಗೊಳ್ಳಲು ಕ್ಷೇತ್ರ ಮಾಹಿತಿ ಪ್ರಸಾರ ಚಟುವಟಿಕೆಗಳಡಿಯ ಅನುದಾನ ಪರಿಮಿತಿಯನ್ನು (B 8,9&10) ಹೆಚ್ಚಸಲಾಗಿದೆ. ಆದ್ದರಿಂದ ರಾಜ್ಯಗಳು ಅಂತಹ ಚಟುವಟಿಕೆಗಳಿಗೆ ಹೆಚ್ಚು ಗಮನ ಕೊಡುವದು ಅತ್ಯಗತ್ಯ.

9. **ಪ್ರಗತಿಪರ ರೈತರ ಸಾಧನೆಗಳನ್ನು ಗುರುತಿಸಿ ಮನ್ನಣೆ ಮಾಡುವದರಿಂದ ಅಲ್ಲಿಯ ಇತರೆ ರೈತರಿಗೆ ಆಧುನಿಕ ತಂತ್ರಜ್ಞಾನಗಳನ್ನು ಮತ್ತು ಸೂಕ್ತವಾದ ಕೃಷಿ ಪದ್ಧತಿಗಳನ್ನು ಅಳವಡಿಸಲು ಹುರಿದುಂಬಿಸುವದು. ಇಂತಹ ಮನ್ನಣೆ ಹಾಗೂ ಪ್ರಶಸ್ತಿಗಳು ರೈತರಲ್ಲಿ ಒಳ್ಳೆಯ ಆರೋಗ್ಯಕರ ಪೈಪೋಟಿಯನ್ನು ನಿರ್ಮಿಸಿ ಅವರ ಉತ್ಪಾದನೆ ಮತ್ತು ಸಾಧನೆ/ಕಾರ್ಯಕ್ಷಮತೆಯನ್ನು ಹೆಚ್ಚಿಸುವವು.** ಅತ್ಮ ಕ್ರ್ಯಾಟೇರಿಯಾ 2010 (A-7, B-6) ರಡಿ ಪ್ರಗತಿಪರ ರೈತರನ್ನು ಪುರಸ್ಕರಿಸಲು ಅನುದಾನದ ಅವಕಾಶವಿರುವದು. ರಾಜ್ಯಗಳು ಈ ಅನುದಾನವನ್ನು ರೈತರಿಗೆ ಸತ್ಕರಿಸುವದಲ್ಲದೆ ಅವರ ಯಶೋಗಾಥೆಗಳನ್ನು ಪ್ರಕಟಿಸಲು ಸದುಪಯೋಗ ಮಾಡಿಕೊಳ್ಳಬಹುದು.

# V. ವಿಸ್ತರಣಾ ಚಟುವಟಿಕೆಗಳನ್ನು ಒಮ್ಮುಖಗೊಳಿಸುವದು

## 5.1. ಒಮ್ಮುಖಗೊಳಿಸುವದು:

**5.1.1.** ತರಬೇತಿ ಮತ್ತು ಸಾಮರ್ಥ್ಯ ಹೆಚ್ಚಿಸುವಲ್ಲಿ ಪೂರಕವಾದ ಅಪೇಕ್ಷಿತ ಫಲ ಕಾಣಲು ವಿವರವಾದ ಮಾರ್ಗದರ್ಶನಗಳನ್ನು ರಾಜ್ಯಗಳೊಂದಿಗೆ ಹಂಚಿಕೊಳ್ಳಾಗಿದೆ. (ಪತ್ರ ಸಂಖ್ಯೆ 26 (4)/2008 AE ï ದಿನಾಂಕ. 04-12-2008).

**5.1.2. ಮಾನವ ಸಂಪನ್ಮೂಲವನ್ನು ಒಮ್ಮುಖಗೊಳಿಸುವದು:** ಅತ್ಮ ಯೋಜನೆಯಲ್ಲಿ ನೀಡಲಾದ ಮಾನವ ಸಂಪನ್ಮೂಲದ ಸಹಾಯದಿಂದಲೇ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (RKVY), ರಾಷ್ಟ್ರೀಯ ಆಹಾರ ಭದ್ರತೆ ಮಿಷನ್ (NFSM) ಹಾಗೂ ರಾಷ್ಟ್ರೀಯ ಮಣ್ಣು ಆರೋಗ್ಯ ಮತ್ತು ಫಲವತ್ತತೆ ನಿರ್ವಹಣೆ ಮುಂತಾದ ಯೋಜನೆಗಳ ಸಂಬಂಧಿತ ಕಾರ್ಯಗಳನ್ನು ಆಯಾ ಯೋಜನೆಗಳಲ್ಲಿ ನಿಗದಿಪಡಿಸಿದಂತೆ ಕಾರ್ಯಗತಗೊಳಿಸುವದು. **ವಿವಿಧ ಕಾರ್ಯಕ್ರಮಗಳಡಿ / ಯೋಜನೆಗಳಡಿ ಕಾರ್ಯಗತವಾಗಿರುವ ವಿಸ್ತರಣಾ ಸಂಬಂದಿತ ಕಾರ್ಯಗಳು ಸಂಪೂರ್ಣ ಒಮ್ಮುಖವಾಗಿರುವದು ಅತ್ಯವಶ್ಯಕ. ಈ ಕಾರ್ಯಕ್ರಮಗಳ / ಯೋಜನೆಗಳ ಕ್ಷೇತ್ರ ಮಟ್ಟದ ವಿಸ್ತರಣಾ ಕಾರ್ಯಕರ್ತರು ಯೋಜನೆಯಲ್ಲಿ ತಾಲೂಕ ಮಟ್ಟದ ಅನುಷ್ಠಾನ ಸಮಿತಿ (TIC) ಅಥವಾ ಅತ್ಮ ಅಡಿಯಲ್ಲಿ ನೀಡಲಾದ ಸಮರ್ಪಿತ ಮಾನವ ಸಂಪನ್ಮೂಲದ ಜೊತೆಗೆ ಸಹಕಾರ ಸಂಯೋಗದೊಂದಿಗೆ ಕಾರ್ಯನಿರ್ವಹಿಸುವದು.** ಈ ವಿಸ್ತರಣಾ ಸಂಬಂದಿತ ಕಾರ್ಯಕರ್ತರು ಮತ್ತು ಇತರೆ ಯೋಜನೆಗಳಲ್ಲಿ/ಕಾರ್ಯಕ್ರಮಗಳಲ್ಲಿ ಸಂದರ್ಶಕರಾಗಿ ಕಾರ್ಯನಿರ್ವಹಿಸುತ್ತಿರುವ ಕಾರ್ಯಕರ್ತರು ತಮ್ಮ ತಮ್ಮ ಐಚ್ಚಿಕ ವಿಷಯಗಳಲ್ಲಿ ವಿಶೇಷಜ್ಞರಾಗಿ ಕಾರ್ಯಮುಂದುವರೆಸಬಹುದು. ಅವರು ತಾಲೂಕ ಅನುಷ್ಠಾನ ಸಮಿತಿ (TIC) ಅಥವಾ ಅತ್ಮ ದಿಂದ ನಿಗದಿಪಡಿಸಿದ ಕಾರ್ಯ ವ್ಯಾಪ್ತಿ ಪ್ರದೇಶದಗಳಲ್ಲಿ ಬಹುಕ್ರಿಯಾತ್ಮಕ ವಿಸ್ತರಣಾ ಕಾರ್ಯಕರ್ತರಾಗಿ ತಮ್ಮ ಕಾರ್ಯಗಳನ್ನು ದ್ವಿಗುಣಗೊಳಿಸಬೇಕು. ಅನುದಾನವನ್ನು ವಿವಿಧ ಯೋಜನೆಗಳಡಿ ವಿಸ್ತರಣಾ ಸಂಬಂಧಿತ ಅಂಗಗಳಿಗೆ ಹಾಗೂ ಕೃಷಿ ಮತ್ತು ಸಹಕಾರ ಇಲಾಖೆಯ ಕಾರ್ಯಕ್ರಮಗಳಿಗೆ ಅತ್ಮದ ಮೂಲಕ ಜಿಲ್ಲಾ ಮಟ್ಟದಲ್ಲಿ ಜೊತೆಗೂಡಿಸಲಾಗುವುದು. **ಎಲ್ಲ ವಿಸ್ತರಣಾ ಕಾರ್ಯಕರ್ತರು ಒಮ್ಮೆ ಸಾಮರಸ್ಯವಾಗಿ ಕಾರ್ಯ ಪ್ರಾರಂಭಿಸಿದ ನಂತರ ಅವರು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (RKVY), ರಾಷ್ಟ್ರೀಯ ಆಹಾರ ಭದ್ರತೆ ಮಿಷನ್ (NFSM) ಮತ್ತು ರಾಷ್ಟ್ರೀಯ ಮಣ್ಣು ಆರೋಗ್ಯ ಮತ್ತು ಫಲವತ್ತತೆ ನಿರ್ವಹಣೆ ಯೋಜನೆಗಳಲ್ಲಿ ಮೆಚ್ಚುಗೆ ಸಾಧಿಸಲು ಒಮ್ಮುಖ ಮತ್ತು ಸಹಕಾರ ಸಾಧನೆಗೆ ಸಂಪೂರ್ಣ ಹೊಣೆಗಾರರಾಗಿರುತ್ತಾರೆ ಮತ್ತು ಪ್ರಯತ್ನಗಳು ಹಾಗೂ ಸಂಪನ್ಮೂಲಗಳು ಪೋಲಾಗದಂತೆ ಹಾಗೂ ಚಟುವಟಿಕೆಗಳು ಪುನರಾವರ್ತನೆಯಾಗದಂತೆ ಎಚ್ಚರಿಕೆ ವಹಿಸುವರು.**

**5.1.3. ಸಂಶೋಧನಾ ವ್ಯವಸ್ಥೆಯ ಜೊತೆಗೆ ಒಮ್ಮುಖಗೊಳಿಸುವದು:** ಪರಿಷ್ಕೃತ ವಿಸ್ತರಣಾ ಸುಧಾರಣೆ ಯೋಜನೆಯು ಸಂಶೋಧನಾ ವ್ಯವಸ್ತೆಗೆ/ ಸಂಶೋಧನಾ ಸಂಸ್ಥೆಗಳಿಗೆ ವಿವಿಧ ಹಂತದ ಅನುಷ್ಠಾನದಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸಲು ಅವಕಾಶ ಕಲ್ಪಿಸಿದೆ. ರಾಜ್ಯ ಕೃಷಿ ವಿಶ್ವ ವಿದ್ಯಾಲಯಗಳು ಮತ್ತು ಕೃಷಿ ವಿಜ್ಞಾನ ಕೇಂದ್ರಗಳು ಸಂಪೂರ್ಣವಾಗಿ ವ್ಯವಸ್ಥಿತ ಸಂಶೋಧನೆ ಮತ್ತು ವಿಸ್ತರಣಾ ಯೋಜನೆ (SREP) ಮತ್ತು ವಿಸ್ತರಣಾ ಕಾರ್ಯ ಯೋಜನೆ ತಯಾರಿಕೆಯಲ್ಲದೆ, ವಿವಿಧ ಕ್ಷೇತ್ರಗಳಲ್ಲಿ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ತೊಡಗಬೇಕು. ಇವುಗಳು ವಿವಿಧ ಮಂಡಳಿಗಳಾದ ಜಿಲ್ಲಾಮಟ್ಟದ ಅತ್ಮ ಚಾಲನಾ ಸಮಿತಿ (ATMA-GB) ರಾಜ್ಯ ಮಟ್ಟದ

ಮಂಜೂರಾತಿ ಸಮಿತಿ/ ಅಂತರ ಇಲಾಖೆಗಳ ಕಾರ್ಯ ತಂಡಗಳ (SLSC/IDWGs), ತಾಲೂಕ ಮಟ್ಟದ ಅನುಷ್ಠಾನ ಸಮಿತಿ, ತಾಲೂಕ ರೈತರ ಸಲಹಾ ಸಮಿತಿ (BTT-BFAC) ಗಳ ಮತ್ತು ರಾಷ್ಟ್ರ ಮಟ್ಟದ ಕರಡು ಪತ್ರ ತಯಾರಿಕೆ ಸಮಿತಿಯ ಸಭೆಗಳಲ್ಲಿ ಪ್ರತಿನಿಧಿಸುತ್ತವೆ. ಇದಲ್ಲದೆ ಕೃಷಿ ವಿಜ್ಞಾನ ಕೇಂದ್ರದ ಪ್ರತಿ ವಿಜ್ಞಾನಿಯನ್ನು ಜಿಲ್ಲೆಯ ಒಂದು ಅಥವಾ ಹೆಚ್ಚು ಸಂಖ್ಯೆಯ ತಾಲೂಕಗಳಿಗೆ ಪ್ರಭಾರಿಗಳನ್ನಾಗಿ ನೇಮಿಸುವದು. **ಕೃಷಿ ವಿಜ್ಞಾನ ಕೇಂದ್ರದ (KVK) ವಿಜ್ಞಾನಿಗಳು ತಾಂತ್ರಿಕವಾಗಿ ತಾಲೂಕ ಮಟ್ಟದ ಅನುಷ್ಠಾನ ಸಮಿತಿಗೆ (TIC) ಸಲಹೆಗಳನ್ನು ನೀಡುವರು ಮತ್ತು ತಾಲೂಕ ಕ್ರಿಯಾ ಯೋಜನೆಗಳ (BAP) ತಯಾರಿಕೆಯಲ್ಲಿ ಕ್ರಿಯಾತ್ಮಕವಾಗಿ ತೊಡಗಿಸಿಕೊಳ್ಳುವರು. ವಿಶೇಷವಾಗಿ ಸಂಶೋಧನೆ ಸಂಬಂದಿತ ವಿಷಯಗಳ/ಅಂತರಗಳ ಯೋಜನೆ ತಯಾರಿಕೆಯಲ್ಲಿ ಭಾಗವಹಿಸುವರು. ಅವರು ಕೃಷಿ ವಿಜ್ಞಾನ ಕೇಂದ್ರದ (KVK) ತಮ್ಮ ಸಹೊದ್ಯೋಗಿಗಳ ಪರಿಣಿತ ವಿಷಯಗಳಿಗೆ ತಕ್ಕಂತೆ ಪ್ರತಿಕ್ರಿಯೆಗಳನ್ನು ಸಂಗ್ರಹಿಸುವರು.** ಪರಿಣಾಮಕಾರಿ ಸಂಶೋಧನೆ ï ವಿಸ್ತರಣೆ ï ರೈತರ ಸಂಪರ್ಕವನ್ನು ಸಾಧಿಸಲು ವಿವಿರವಾದ ಮಾರ್ಗದರ್ಶನಗಳನ್ನು **ಅನುಬಂಧ – V ರಲ್ಲಿ ತಿಳಿಸಲಾಗಿದೆ.**

**5.1.4. ಅಭಿವೃದ್ದಿ ಇಲಾಖೆಗಳೊಂದಿಗೆ ಒಮ್ಮುಖಗೊಳಿಸುವದು:** ರಾಜ್ಯ, ಜಿಲ್ಲೆ ಮತ್ತು ತಾಲೂಕ ಮಟ್ಟದ SREP ಹಾಗೂ ತಾಲೂಕ ಕ್ರಿಯಾ ಯೋಜನೆ ತಯಾರಿಕೆಯಲ್ಲಿ ಅಭಿವೃದ್ದಿ ಇಲಾಖೆಗಳು ನಿಶ್ಚಿತವಾಗಿ ಭಾಗವಹಿಸುವಂತೆ ಅವಶ್ಯಕವಾದ ಒಮ್ಮುಖಗೊಳಿಸುವ ಪ್ರಯತ್ನಗಳನ್ನು ಕೈಗೊಳ್ಳಬೇಕು. ರಾಜ್ಯ ಮಟ್ಟದ ಮಂಜೂರಾತಿ ಸಮಿತಿ (SLSC) ಗೆ ಯೋಜನೆಯಡಿ ಅನುದಾನಕ್ಕಾಗಿ ಸಲ್ಲಿಸುವಾಗ, ಕ್ರಿಯಾ ಯೋಜನೆಗಳ ಚಟುವಟಿಕೆಗಳನ್ನು ಅತ್ಮ ಕಾರ್ಯಕ್ರಮದಡಿ ಅನುದಾನಿತ ಮತ್ತು ಇತರೆ ಯೋಜನೆಗಳಿಂದ ಅನುದಾನಿತ ವೆಂಬುದನ್ನು ಸ್ಪಷ್ಟವಾಗಿ ವಿಂಗಡಿಸಿ ನಮೂದಿಸಬೇಕು. ಅದಲ್ಲದೆ ಅವಶ್ಯಕ ಒಮ್ಮುಖತೆಯನ್ನು ಖಚಿತಪಡಿಸಲು ಸಮಗ್ರ ಜಿಲ್ಲಾ ಕೃಷಿ ಯೋಜನೆ (CDAPs) ಮತ್ತು ಜಿಲ್ಲಾ ಕೃಷಿ ಕ್ರಿಯಾ ಯೋಜನೆಗಳನ್ನು (DAAPs) ಜೊತೆಗೂಡಿಸಬೇಕು, ಇವುಗಳು ಮುಂದಿನ ಹಂತದಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ, ರಾಜ್ಯ ಮಟ್ಟದ ಯೋಜನಾ ಮಂಜೂರ ಸಮಿತಿಯು ಒಪ್ಪಿಗೆ ನೀಡುವ ರಾಜ್ಯ ಕೃಷಿ ಯೋಜನೆಯ ಭಾಗಗಳಾಗುವವು. ಇದರೊಂದಿಗೆ ಈ ಯೋಜನೆಯು, ಪಂಚಾಯತಿಗಳಿಗೆ ವಿವಿಧ ರೈತ ಉದ್ದೇಶಿತ ವಿವಿಧ ಚಟುವಟಿಕೆಗಳ ಫಲಾನುಭವಿಗಳ ಮತ್ತು ರೈತ ಮಿತ್ರರ ಆಯ್ಕೆ ಮಾಡಲು ಕ್ರಿಯಾತ್ಮಕವಾಗಿ ಭಾಗವಹಿಸಲು ಅವಕಾಶ ಕಲ್ಪಿಸಿದೆ.

**5.1.5. ಖಾಸಗಿ ಸಂಸ್ಥೆಗಳ ಜೊತೆಗೆ ಸಹಭಾಗಿತ್ವ ಮತ್ತು ಒಮ್ಮುಖಗೊಳಿಸುವದು:** ಬಹು ಸಂಖ್ಯಾ–ಸೇವಾಸಂಸ್ಥೆಗಳ ವಿಸ್ತರಣಾ ಕಾರ್ಯನೀತಿಯ ಪ್ರೋತ್ಸಾಹವನ್ನು ನಿಶ್ಚಿತಗೊಳಿಸಲು ಮತ್ತು ಯೋಜನೆಯ ಚಟುವಟಿಕೆಗಳನ್ನು ಸಾರ್ವಜನಿಕ ಹಾಗೂ ಖಾಸಗಿ ಸಹಭಾಗಿತ್ವದ ಆಧಾರದಮೇಲೆ ಅನುಷ್ಠಾನಗೊಳಿಸಲು, **ಜಿಲ್ಲಾ ಮಟ್ಟದ ಯೋಜನೆಯ ಕನಿಷ್ಟ ಶೇ. 10 ರಷ್ಟು ಅನುದಾನವನ್ನು ಸರ್ಕಾರೇತರ ಸಂಸ್ಥೆಗಳು (NGOs, FOs, PRIs) ಉದಾಹರಣೆಗೆ ಸಹಕಾರಿ ಸಂಘಗಳು, ಸಮಾಂತರ ವಿಸ್ತರಣಾ ಕಾರ್ಯಕರ್ತರು, ಕೃಷಿ ಉದ್ಯಮಿಗಳು, ಪರಿಕರಗಳ ಸರಬರಾಜುದಾರರು, ಸಹಕಾರಿ ಸಂಸ್ಥೆಗಳು ಇತ್ಯಾದಿ, ಯೋಜನೆಯ ಚಾಲನಾ ಚಟುವಟಿಕೆಗಳಿಗೆ ತೊಡಿಗಿಸಿಕೊಳ್ಳುವಂತೆ ನೋಡಿಕೊಳ್ಳುವದು.** ಈ ಸರ್ಕಾರೇತರ ತಾವು ಅನುಷ್ಠಾನಗೊಳಿಸಿದ ವಿಸ್ತರಣಾ ಚಟುವಟಿಕೆಗಳ ವೆಚ್ಚದ ಶೇ. 10 ರ ಪರಿಮಿತಿಯೊಳಗೆ ಸೇವಾ ವೆಚ್ಚ ಪಡೆಯಲು ಅರ್ಹರಾಗಿರುತ್ತಾರೆ.

ಸರ್ಕಾರೇತರ ಸಂಸ್ಥೆಗಳನ್ನೊಳಗೊಂಡ ರಾಜ್ಯ ಮಟ್ಟದಲ್ಲಿ ತಯಾರಿಸಿದ ವಿಸ್ತರಣಾ ಕಾರ್ಯ ಯೋಜನೆಯನ್ನು ಅನುಷ್ಠಾನ ಸಮಿತಿ /ರೈತರ ಸಲಹಾ ಸಮಿತಿಗಳ (TIC/FAC) ಶಿಫಾರಸು ಮತ್ತು ಸಂಬಂಧಿಸಿದ ಅತ್ಮ ಚಾಲನಾ ಸಮಿತಿಯ ಅನುಮೋದನೆ ಪಡೆಯದೆ ರಾಜ್ಯ ಮಟ್ಟದ ಮಂಜೂರಾತಿ ಸಮಿತಿ /ಅಂತರ ಇಲಾಖೆಗಳ ಕಾರ್ಯ ತಂಡ (SLSC/IDWG) ಅನುಮೋದಿಸಬಹುದು. ರಾಜ್ಯ ಮಟ್ಟದ ಮಂಜೂರಾತಿ ಸಮಿತಿ (SLSC) ಯಿಂದ ರಾಜ್ಯ ವಿಸ್ತರಣಾ ಕ್ರಿಯಾ ಯೋಜನೆಯ (SEWP) ಅನುಮೋದನೆಯ ನಂತರ, ರಾಜ್ಯ ಮಟ್ಟದ ಕಾರ್ಯಕರ್ತರು ಅನುಮೋದನೆಯಾದ ಚಟುವಟಿಕೆಗಳ ತ್ವರಿತ ಅನುಷ್ಠಾನಕ್ಕೆ ಸ್ವಯಂ ಸೇವಾ ಸಂಸ್ಥೆಗಳ ಮತ್ತು ಜಿಲ್ಲಾ ಮಟ್ಟದ ಅತ್ಮ ಸಂಸ್ಥೆಗಳ ಮಧ್ಯ ಅವಶ್ಯಕ ಸಂಯೋಜನೆಗೆ ಅವಕಾಶಮಾಡಿಕೊಡಬೇಕು. ಸ್ವಯಂ ಸೇವಾ ಸಂಸ್ಥೆಗಳಿಗೆ ಅನುದಾನವನ್ನು ರಾಜ್ಯದಲ್ಲಿ ರಾಜ್ಯ ಮಟ್ಟದ ಮಂಜೂರಾತಿ ಸಮಿತಿ /ಅಂತರ ಇಲಾಖೆಗಳ ಕಾರ್ಯ ತಂಡಗಳ (SLSC/IDWG) ತೀರ್ಮಾನದ ಮೇರೆಗೆ ಬಿಡುಗಡೆಗೊಳಿಸುವದು. ಅದಕ್ಕೆ ಅವಶ್ಯಕವಾದ ಅನುದಾನವನ್ನು ರಾಜ್ಯಮಟ್ಟದಲ್ಲಿ ಬೇರೆಯಾಗಿರಿಸಬಹುದು.

ರಾಜ್ಯಗಳು ಯೋಜನೆಯ ಚಟುವಟಿಕೆಗಳ ಸಂಯೋಜನೆಗೆ ಹೆಚ್ಚಿನ ಅನಭವ, ಕಾರ್ಯಕ್ಷಮತೆ, ಮತ್ತು ರಾಜ್ಯ ಮಟ್ಟದಲ್ಲಿ ಒಳ್ಳೆಯ ಹೆಸರುವಾಸಿಯಾದ ಉನ್ನತಮಟ್ಟದ ಹಾಗೂ ಆಯ್ದ ಚಟುವಟಿಕೆಗಳ ವಲಯಗಳಲ್ಲಿ ಹೆಚ್ಚನ ತಾಂತ್ರಿಕ ಶಕ್ತಿಯುಳ್ಳ ಸ್ವಯಂ ಸೇವಾ ಸಂಸ್ಥೆಗಳನ್ನು ಆಯ್ಕೆಮಾಡಿ ನಿರುಪಯುಕ್ತ ಮತ್ತು ನಿಷ್ಪ್ರಯೋಜಕ ಸಂಸ್ಥೆಗಳನ್ನು ದೂರವಿಡಬೇಕು. ರಾಜ್ಯಗಳು ಸ್ವಯಂ ಸೇವಾ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ಸದರಿಯನ್ನು ಜಿಲ್ಲೆಯ ಅತ್ಮಗಳಿಗೆ ತಿಳಿಸುವದು.

## 5.2. ಸಂಪರ್ಕ ಕಲ್ಪಿಸುವ್ಯದು:

ರಾಜ್ಯ ಮಟ್ಟದ ಮಂಡಳಿಗಳು / ಅಧಿಕಾರಿಗಳು ಅಂದರೆ ರಾಜ್ಯ ನೋಡಲ್ ಅಧಿಕಾರಿ/ ರಾಜ್ಯ ಸಂಯೋಜನಾಧಿಕಾರಿಗಳು ಮಾಹಿತಿ ಹಂಚಿಕೊಳ್ಳಲು ಎಲ್ಲ ಸಂಸ್ಥೆಗಳ ಸಂಪರ್ಕ ಕಲ್ಪಿಸುವುದನ್ನು ನಿಶ್ಚಿತಗೊಳಿಸುವರು (ಯಶೋಗಾಥೆಗಳು, ಉತ್ತಮ ಪರಿಪಾಠಗಳು, ಸಂಶೋಧನೆ/ವಿಸ್ತರಣಾ ವಿಷಯಗಳು, ವಿಶೇಷ ತಂತ್ರಜ್ಞಾನಗಳ ಮತ್ತು ಕಾರ್ಯನೀತಿಗಳ ಅನುಷ್ಠಾನ ಮುಂತಾದವುಗಳು).

ಎಲ್ಲ ಜಿಲ್ಲೆಯ ಅತ್ಮಗಳು ತಮ್ಮ ಮಾಹಿತಿಯನ್ನು ತಮ್ಮದೇ ಆದ ಅಂತರಜಾಲ ವಿಳಾಸವನ್ನು ಹೊಂದಿ ಅದರಲ್ಲಿ ತಮ್ಮ ಚಟುವಟಿಕೆಗಳು, ನವೀನ ಅನ್ವೇಷಣೆಗಳು, ಇತರರಿಗೆ ಮಾದರಿಯಾಗುವಂತಹ ಯಶೋಗಾಥೆಗಳ ಮತ್ತು ಇನ್ನಿತರೆ ವಿಷಯಗಳ ಮಾಹಿತಿಯನ್ನು ಹಂಚಿಕೊಳ್ಳಬೇಕು. ಈ ವಿಳಾಸವು ರಾಜ್ಯ ಮತ್ತು ದೇಶದ ಇತರೆ ಸಂಬಂದಿತ ಅಂತರಜಾಲ ವಿಳಾಸಗಳೊಂದಿಗೆ ಸಂಪರ್ಕವನ್ನು ಹೊಂದಿರುವದು.

# VII ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ

## 7.1. ಮೇಲ್ವಿಚಾರಣೆ ಹಾಗೂ ಮೌಲ್ಯಮಾಪನ:

7.1.1 ತಾಲ್ಲೂಕು, ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಯೋಜನೆಯ ಚಟುವಟಿಕೆಗಳ ಉಸ್ತುವಾರಿ ಮತ್ತು ಮೌಲ್ಯಮಾಪನವನ್ನು ನಿರಂತರವಾಗಿ ನಿಯಮಿತ ಹಂತಗಳಲ್ಲಿ ಕೈಗೊಳ್ಳಲು ನಿರ್ದಿಷ್ಟ ಯಾಂತ್ರಿಕ ವ್ಯವಸ್ಥೆಯ ಚಾಲನೆ ಮಾಡಲಾಗಿದೆ. ತಾಲ್ಲೂಕಾ ಮಟ್ಟದಲ್ಲಿ ತಾಲ್ಲೂಕಾ ರೈತರ ಸಲಹಾ ಸಮಿತಿ (BFAC) ಹಾಗೂ ತಾಲೂಕಾ ಅತ್ಮ ಅನುಷ್ಠಾನ ಸಮಿತಿ (TIC) ಗಳು ಜಿಲ್ಲಾ ಮಟ್ಟದಲ್ಲಿ ಅತ್ಮ ಚಾಲನಾ ಸಮಿತಿಯ ಮುಖಾಂತರ ಉಸ್ತುವಾರಿ ಮತ್ತು ಮೌಲ್ಯಮಾಪನ ಮಾಡುವುದಾಗಿದೆ. ಯೋಜನೆಯಲ್ಲಿ ಅವಶ್ಯವಿರುವ ಒಮ್ಮುಖವನ್ನು ಸಾಧಿಸಲು ರಾಜ್ಯಮಟ್ಟದ ಮಂಜೂರಾತಿ ಸಮಿತಿ (SLSC) ಸ್ಥಾಪನೆಗೊಂಡು, ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (RKVY) ಅಡಿಯಲ್ಲಿ ಸಮಗ್ರ ಜಿಲ್ಲಾ ಕೃಷಿ ಕಾರ್ಯಸೂಚಿ ಪರಿಗಣಿಸಿ ಧನಸಹಾಯದೊಂದಿಗೆ ರಾಜ್ಯ ವಿಸ್ತರಣಾ ಕಾರ್ಯಯೋಜನೆ (SEWP) ಯನ್ನು ಸಹ ಪರಿಗಣಿಸಿ ಅನುಮೋದಿಸಿ ಹಂತ ಹಂತವಾಗಿ ಉಸ್ತುವಾರಿ ಮಾಡುವುದು. ಅಂತರ ಇಲಾಖೆಗಳ ಕಾರ್ಯ ಗುಂಪಿನ ಆಯುಕ್ತರು ಕೃಷಿ ಉತ್ಪಾದನೆ/ ಪ್ರಧಾನ ಕಾರ್ಯದರ್ಶಿಗಳು (ಕೃಷಿ ಇಲಾಖೆ) ಅಧ್ಯಕ್ಷತೆಯಲ್ಲಿ ವಿಸ್ತರಣಾ ಸುಧಾರಣೆಯ ನೀತಿ ಧೋರಣೆಗಳ ಚೌಕಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿದೆ ಎಂದು ದೃಢಪಡಿಸಿಕೊಳ್ಳಲು ನಿರಂತರ ಉಸ್ತುವಾರಿಯನ್ನು ಕೈಗೊಳ್ಳುತ್ತಾರೆ. ಉಸ್ತುವಾರಿ ಸಮಿತಿಯು ಹೆಚ್ಚುವರಿ ಕಾರ್ಯದರ್ಶಿಗಳ ಅಧ್ಯಕ್ಷತೆ, ಕೃಷಿ ಮತ್ತು ಸಹಕಾರ ಇಲಾಖೆ (DAC), ಮತ್ತು ನೀತಿ ಧೋರಣೆ ಸಮಿತಿಯ ಮುಖ್ಯಸ್ಥರಾದ ಕಾರ್ಯದರ್ಶಿ (A&C)ಗಳು ರಾಷ್ಟ್ರಮಟ್ಟದಲ್ಲಿ ಯೋಜನೆಯ ಪುನರಾವಲೋಕನ, ಉಸ್ತುವಾರಿ ಮತ್ತು ಕಾರ್ಯಕ್ರಮಗಳನ್ನು ಕೃಷಿ ಮತ್ತು ಸಹಕಾರ ಇಲಾಖೆ (DAC) ಮಟ್ಟದಲ್ಲಿ ಅನುಷ್ಠಾನಗೊಳಿಸಲು ಮಾರ್ಗದರ್ಶನ ನೀಡುವುದು.

7.1.2 ಅತ್ಮ ಯೋಜನೆಯ ನಿರ್ದೇಶಕರು ಅಂತರಜಾಲ ವಿಳಾಸ: **http://dacnet.nic.in/extensionreforms ನಲ್ಲಿ ಪ್ರತಿಯೊಂದು ಜಿಲ್ಲೆಯ ಮಾಸಿಕ ಮತ್ತು ತ್ರೈಮಾಸಿಕ ವರದಿಗಳನ್ನು ಪ್ರತಿ ಮಾಹೆಯ ೫ನೇಯ ತಾರೀಖಿನೊಳಗಾಗಿ ಎಲ್ಲಾ ಜಿಲ್ಲೆಯ ವರದಿಗಳನ್ನು ಮೇಲ್ಕಾಣಿಸಿದ ಅಂತರಜಾಲ ವಿಳಾಸದಲ್ಲಿ ಸೇರಿಸಿದ್ದನ್ನು ಖಚಿತ ಪಡಿಸಿಕೊಂಡು ಪ್ರತಿ ಮಾಹೆಯ ೧೦ ನೇಯ ತಾರೀಖಿನೊಳಗಾಗಿ ಈ ವರದಿಯನ್ನು ರಾಜ್ಯ ನೋಡೆಲ್ ಅಧಿಕಾರಿಗಳು ಪರಿಶೀಲಿಸುವರು. ಯಾವುದೇ ವರದಿಯನ್ನು ಪತ್ರಗಳ ಮುಖಾಂತರ ಸಲ್ಲಿಸದೇ ಎಲ್ಲ ವರದಿಗಳನ್ನು ೧ನೇಯ ಜುಲೈ ೨೦೧೦ ರಿಂದ ಅಂತರಜಾಲ ವಿಳಾಸದ ಮುಖಾಂತರ ಸಲ್ಲಿಸುವುದಾಗಿದೆ. ಈ ಮೇಲ್ಕಾಣಿಸಿದ ಮಾಹಿತಿ ಮತ್ತು ತಂತ್ರಜ್ಞಾನ ನಿರ್ವಹಣೆಯ ವಿವರ ಪಟ್ಟಿಯ ಪ್ರಕಾರ ವರದಿಗಳು ಅಂತರಜಾಲ ವಿಳಾಸದಲ್ಲಿ ಬಾರದೇ ಇದ್ದಲ್ಲಿ, ಆ ರಾಜ್ಯಕ್ಕೆ ಯಾವುದೇ ಹಣಕಾಸಿನ ಬಿಡುಗಡೆ ಮಾಡಲಾಗುವುದಿಲ್ಲ.** ಪರಿಣಾಮಕಾರಿಯಾಗಿ ಉಸ್ತುವಾರಿ ಮತ್ತು ಮೌಲ್ಯಮಾಪನಗೈಯಲು ಯೋಜನೆಯ ಕ್ಷೇತ್ರದಲ್ಲಿ ವಿವಿಧ ಶಿಸ್ತು ಪಾಲನೆಯ ತಂಡಗಳ ಕ್ಷೇತ್ರ ವೀಕ್ಷಣೆ, ವರದಿಗಳು, ಚಟುವಟಿಕೆಗಳು, ಸಂಕೀರ್ಣಗಳು ಇತ್ಯಾದಿಗಳಿಂದ ಖಚಿತಪಡಿಸುವುದು. ಈ ಯೋಜನೆಯಲ್ಲಿ ಬಾಹ್ಯ ತಂಡದಿಂದ ಉಸ್ತುವಾರಿ ಮತ್ತು ಮೌಲ್ಯಮಾಪನವನ್ನು ಆಯಾ ರಾಜ್ಯದಲ್ಲಿ ಒದಗಿಸಬಹುದು. ಬಾಹ್ಯ ತಂಡದ ಉಸ್ತುವಾರಿ ಮತ್ತು ಮೌಲ್ಯಮಾಪನಗೈದು ವರದಿಗಳನ್ನು ಪ್ರತಿವರ್ಷ ಕೃಷಿ ಮತ್ತು ಸಹಕಾರ ಇಲಾಖೆ (DAC) ಗೆ ತಪ್ಪದೇ ರವಾನಿಸುವುದು. ಕೃಷಿ ಮತ್ತು ಸಹಕಾರ ಇಲಾಖೆ (DAC) ಯು

ಉಸ್ತುವಾರಿ ಮತ್ತು ಮೌಲ್ಯಮಾಪನೆದೊಂದಿಗೆ "ವಿಸ್ತರಣಾ ಸುಧಾರಣೆಯ ಕೇಂದ್ರಿಯ ಸಂಸ್ಥೆಗಳು ವಿಸ್ತರಣಾ ನಿರ್ದೇಶನಾಲಯ"ಕ್ಕೆ ಯೋಜನೆಯ ಪರಿಣಾಮ ಮತ್ತು ಮೌಲ್ಯಮಾಪನವನ್ನು ಸಹ ಜೊತೆಗೂಡಿ ಕೈಕೊಳ್ಳುವುದು. ಅಲ್ಲದೇ, ಎಲ್ಲ ಚಟುವಟಿಕೆಗಳನ್ನು ತ್ರೈಮಾಸಿಕವಾಗಿ ರಾಷ್ಟ್ರೀಯ ಮಟ್ಟದ ಸಭೆಯಲ್ಲಿ ಪರೀವಿಕ್ಷಣೆ ನಡೆಸುವುದು.

**7.1.3** ವಿಷಯ ತಜ್ಞರು ಕೈಗೊಂಡ ವಿಸ್ತರಣಾ ಚಟುವಟಿಕೆಗಳು ಪ್ರಗತಿಯನ್ನು ತಾಲೂಕಾ ಮಟ್ಟದಲ್ಲಿ ಕ್ಷೇತ್ರಪಾಠಶಾಲೆ, ಪ್ರಾತ್ಯಕ್ಷಿಕೆ, ತಾಕುಗಳು, ತರಬೇತಿ, ಕ್ಷೇತ್ರ ದರ್ಶನ ಮತ್ತು ರೈತ ಮಿತ್ರರನ್ನು ಅತ್ಯಂತ ಸಮೀಪವಾಗಿ ಅಂತರಜಾಲ ಆಧಾರಿತ ಸಂಪರ್ಕದಿಂದ ಉಸ್ತುವಾರಿ ಮಾಡುವುದು. ಮತ್ತು ತಾಲ್ಲೂಕಾ ಮಟ್ಟದಲ್ಲಿ ತಾಲ್ಲೂಕಾ ಅನುಷ್ಠಾನ ಸಮಿತಿ ಜಿಲ್ಲಾ ಮಟ್ಟದಲ್ಲಿ ಅತ್ಮ ಹಾಗೂ ರಾಜ್ಯದಲ್ಲಿ ರಾಜ್ಯಮಟ್ಟದ ಮಂಜೂರಾತಿ ಸಮಿತಿಗಳು ಕ್ರಮ ಬದ್ಧವಾಗಿ ಉಸ್ತುವಾರಿ ಮತ್ತು ಸಭೆಗಳನ್ನು ಏರ್ಪಡಿಸಿ ಪ್ರಗತಿ ಪರಿಶೀಲನೆ ಮಾಡುವುದು. **ಈ ಕಾರ್ಯ ನಿಮಿತ್ತ ಅಂತರಜಾಲ ಆಧಾರಿತ ಸಂಪರ್ಕವನ್ನು ಒದಗಿಸಲಾಗುವದು.**

**7.1.4** ಅತ್ಮ ಯೋಜನೆಯಡಿಯಲ್ಲಿರುವ ಕ್ಷೇತ್ರ ಪಾಠಶಾಲೆಗಳು ಉತ್ಪನ್ನ ಆಸಕ್ತ ಗುಂಪುಗಳು ಮತ್ತು ರೈತ ಮಿತ್ರರು ಕೈಗೊಂಡ ವಿಸ್ತರಣಾ ಚಟುವಟಿಕೆಗಳನ್ನು ಪರಿಣಾಮ ಮೌಲ್ಯಮಾಪನ ಅಧ್ಯಯನಗೈಯಲು ಪರಿಣಿತ ಸಂಸ್ಥೆಗಳನ್ನು ನಿಯೋಜಿಸಿ ವರದಿಯ ಪ್ರಕಾರ ನ್ಯೂನತೆಗಳ ನಿವಾರಣೆಗಾಗಿ ಕೃಷಿ ಪರಿಸರ ಪರಿಸ್ಥಿತಿಗಳ(AES) ಆಧಾರದ ಮೇರೆಗೆ ಉದ್ದೇಶಗಳನ್ನು ಸಕಾಲ ದಲ್ಲಿ ಕಾರ್ಯಗತಗೊಳಿಸಲು ಕಾರ್ಯಸೂಚಿಯನ್ನು ರೂಪಿಸುವುದು.

# VIII. ಅನುಬಂಧಗಳು

ಅನುಬಂಧ – 1 (ಇ)

# ಜಿಲ್ಲಾ ಮಟ್ಟದ ಅತ್ಮ ಚಾಲನಾ ಸಮಿತಿ (GB)

ಅತ್ಮ ಚಾಲನಾ ಸಮಿತಿಯು ನೀತಿ ಧೋರಣೆ ರೂಪಿಸುವ ಸಮಿತಿ ಸಭೆಯಾಗಿದ್ದು, ಅತ್ಮ ಯೋಜನೆಯ ಕಾರ್ಯನಿರ್ವಹಣೆ ಮತ್ತು ಅಭಿವೃದ್ಧಿ ಮಾರ್ಗದರ್ಶನ ಮತ್ತು ಪ್ರಗತಿಯ ಪುನರಾವಲೋಕನಕ್ಕೆ ಸಹಕಾರಿಯಾಗಿದೆ ಹಾಗೂ ಯೋಜನೆ ಅನುಷ್ಠಾನದ ದಿನನಿತ್ಯದ ಚಟುವಟಿಕೆಗಳನ್ನು ಯೋಜಿಸುವುದು ಮತ್ತು ಕಾರ್ಯಗತಗೊಳಿಸುವವರೆಗೆ ಜವಾಬ್ದಾರಿಯಾಗಿದೆ.

## ರಚನೆ

| | | |
|---|---|---|
| 1 | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು (CEO), ಜಿಲ್ಲಾ ಪಂಚಾಯತ | ಅಧ್ಯಕ್ಷರು |
| 2 | ಜಂಟಿ ನಿರ್ದೇಶಕರು/ ಉಪ ನಿರ್ದೇಶಕರು (ಕೃಷಿ) | ಸದಸ್ಯರು |
| 3 | ಜಂಟಿ ನಿರ್ದೇಶಕರು/ ಉಪ ನಿರ್ದೇಶಕರು (ತೋಟಗಾರಿಕೆ) | ಸದಸ್ಯರು |
| 4 | ಜಂಟಿ ನಿರ್ದೇಶಕರು/ ಉಪ ನಿರ್ದೇಶಕರು (ಪಶುಸಂಗೋಪನೆ, ಮೀನುಗಾರಿಕೆ, ರೇಷ್ಮೆ) | ಸದಸ್ಯರು |
| 5 | ವಲಯ ಕೃಷಿ ಸಂಶೋಧನಾ ಕೇಂದ್ರದ ಪ್ರತಿನಿಧಿ | ಸದಸ್ಯರು |
| 6 | ಕಾರ್ಯಕ್ರಮ ಸಂಯೋಜಕರು, ಕೃಷಿ ವಿಜ್ಞಾನ ಕೇಂದ್ರ | ಸದಸ್ಯರು |
| 7 | ರೈತ ಪ್ರತಿನಿಧಿ ï ಒಬ್ಬರು | ಸದಸ್ಯರು |
| 8 | ಪಶುಸಂಗೋಪನೆ / ಹೈನು ಉತ್ಪಾದಕರು – ಒಬ್ಬರು | ಸದಸ್ಯರು |
| 9 | ತೋಟಗಾರಿಕೆ ರೈತರು – ಒಬ್ಬರು | ಸದಸ್ಯರು |
| 10 | ರೈತ ಮಹಿಳೆ ಆಸಕ್ತ ಗುಂಪುಗಳ ಪ್ರತಿನಿಧಿ – ಒಬ್ಬರು | ಸದಸ್ಯರು |
| 11 | ಪರಿಶಿಷ್ಟ ಜಾತಿ / ಪ. ಪಂಗಡ ರೈತ ಪ್ರತಿನಿಧಿ – ಒಬ್ಬರು | ಸದಸ್ಯರು |
| 12 | ಸರ್ಕಾರೇತರ ಸಂಘ ಸಂಸ್ಥೆ ಪ್ರತಿನಿಧಿ – ಒಬ್ಬರು | ಸದಸ್ಯರು |
| 13 | ಜಿಲ್ಲೆಯ ಅಗ್ರಣೀಯ ಬ್ಯಾಂಕ್ ಅಧಿಕಾರಿ | ಸದಸ್ಯರು |
| 14 | ಜಿಲ್ಲಾ ಕೈಗಾರಿಕಾ ಕೇಂದ್ರದ ಪ್ರತಿನಿಧಿ | ಸದಸ್ಯರು |
| 15 | ಕೃಷಿ ಮಾರುಕಟ್ಟೆ ಮಂಡಳಿಯ ಪ್ರತಿನಿಧಿ | ಸದಸ್ಯರು |
| 16 | ಪರಿಕರ ಪೂರೈಕೆಗಳ ಸಂಘದ ಪ್ರತಿನಿಧಿ | ಸದಸ್ಯರು |
| 17 | ವಿಸ್ತರಣಾ ಸೇವೆಯಲ್ಲಿ ತೊಡಗಿಸಿಕೊಂಡು ತರಬೇತಿ ಪಡೆದ ಪರಿಕರ ಮಾರಾಟಗಾರರ ಪ್ರತಿನಿಧಿ | ಸದಸ್ಯರು |
| 18 | ಮೀನುಗಾರಿಕೆ/ ರೇಷ್ಮೆ ಪ್ರತಿನಿಧಿ – ಒಬ್ಬರು | ಸದಸ್ಯರು |
| 19 | ಜಿಲ್ಲಾ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಪ್ರತಿನಿಧಿ | ಸದಸ್ಯರು |
| 20 | ಅತ್ಮ ಯೋಜನಾ ನಿರ್ದೇಶಕರು | ಸದಸ್ಯ ಕಾರ್ಯದರ್ಶಿ |

* ಯೋಜನೆಯ ಅನುದಾನ ನಿರ್ವಹಣೆಯನ್ನು ಇನ್ನು ಮುಂದೆ ಅತ್ಮ ಯೋಜನೆಯ ನಿರ್ದೇಶಕರು ನಿರ್ವಹಿಸುವರು

**ಟಿಪ್ಪಣಿ:**

i. ರಾಜ್ಯಗಳು ಅವಶ್ಯವಿದ್ದಲ್ಲಿ ಹೆಚ್ಚಿನ ಸದಸ್ಯರುಗಳನ್ನು ಮಂಡಳಿಯ ಒಪ್ಪಿಗೆ ಮೇರೆಗೆ ಆರಿಸಿಕೊಳ್ಳುವುದು.

ii. ಎಲ್ಲಾ ರೈತ ಪ್ರತಿ ನಿಧಿಗಳನ್ನು ಜಿಲ್ಲಾ ರೈತರ ಸಲಹಾ ಸಮಿತಿಯಿಂದ ಒಮ್ಮತದಿಂದ ಅಥವಾ ಬಹುಅಭಿಪ್ರಾಯದಿಂದ ನೇಮಿಸುವುದು.

**ಆಯ್ಕೆ / ನೇಮಿಸುವುದು/ ಸದಸ್ಯರ ಕರಾರುಗಳು:**

- ಚಾಲನಾ ಸಮಿತಿಯು ಅಧಿಕಾರೇತರ ಸದಸ್ಯರನ್ನು ಎರಡು ವರ್ಷಗಳ ಅವಧಿಯವರೆಗೆ ಚಾಲನಾ ಸಮಿತಿಯು ಅಧ್ಯಕ್ಷರ ಶಿಫಾರಸ್ಸಿನ ಮೇರೆಗೆ APC ಯಿಂದ ಆಯ್ಕೆ ಮಾಡುವುದು
- ಸುಮಾರು ಮೂರನೇ ಎರಡು ಭಾಗ ಸದಸ್ಯರು ಚಾಲನಾ ಸಮಿತಿಯು ಹೆಚ್ಚಿನ ವರ್ಷದವರೆಗೆ ಪರಿಣಾಮಕಾರಿಯಾಗಿ ನಡೆಸಲು ಕೆಲವು ಪ್ರಾರಂಭಿಕ ಆಯ್ಕೆಗಳನ್ನು ಅಸ್ಥಿರತೆಯಿಂದ ಕೈಗೊಳ್ಳುವುದು.
- ರೈತ ಮಹಿಳೆಯರ ಆಸಕ್ತಿಗಳನ್ನು ಸಂಪೂರ್ಣವಾಗಿ ಪರಿಗಣಿಸಲು ಚಾಲನಾ ಸಮಿತಿಯು ಪ್ರತಿಶತ ಮೂವತ್ತರಷ್ಟು ರೈತ ಪ್ರತಿನಿಧಿಗಳನ್ನು ರೈತ ಮಹಿಳೆಯರಿಗೆ ಮೀಸಲಿಡುವುದು

**ಅತ್ಮ ಚಾಲನಾ ಸಮಿತಿ ಸಭೆಯ ಪ್ರಮುಖ ಕಾರ್ಯ ಚಟುವಟಿಕೆಗಳು:**

1. ಭಾಗೀದಾರ ಇಲಾಖೆ/ ವಿಭಾಗಗಳಿಂದ ತಯಾರಿಸಿದ ಮತ್ತು ಸಲ್ಲಿಸಿದ ಕೌಶಲ್ಯಯುಕ್ತ ಸಂಶೋಧನಾ ಮತ್ತು ವಿಸ್ತರಣಾ ಯೋಜನೆ (SREP) ಹಾಗೂ ವಾರ್ಷಿಕ ಕಾರ್ಯ ಯೋಜನೆ ವಿಮರ್ಶಿಸುವುದು ಮತ್ತು ಒಪ್ಪಿಗೆ ನೀಡುವುದು.
2. ಭಾಗೀದಾರ ಇಲಾಖೆಗಳು ಮಂಡಿಸಿದ ವಾರ್ಷಿಕ ವರದಿಯನ್ನು ಸ್ವೀಕರಿಸುವುದು ಮತ್ತು ವಿಮರ್ಶಿಸುವುದು. ಜಿಲ್ಲೆಯಲ್ಲಿ ಕೈಗೊಳ್ಳುವ ಹಲವಾರು ಸಂಶೋಧನಾ ಮತ್ತು ವಿಸ್ತರಣಾ ಚಟುವಟಿಕೆ ಕೈಗೊಳ್ಳಲು ಬೇಕಾದ ಅವಶ್ಯಕ ಪ್ರತಿಕ್ರಿಯೆ ಮತ್ತು ನಿರ್ದೇಶನ ನೀಡುವುದು.
3. ಜಿಲ್ಲೆಯಲ್ಲಿ ಕೈಗೊಳ್ಳುವ ಆದ್ಯತಾ ಸಂಶೋಧನಾ, ವಿಸ್ತರಣಾ ಮತ್ತು ಸಂಬಂಧಿತ ಚಟುವಟಿಕೆಗಳಿಗೆ ಯೋಜನಾ ಅನುದಾನವನ್ನು ಸ್ವೀಕರಿಸುವುದು ಮತ್ತು ಬಿಡುಗಡೆ ಗೊಳಿಸುವುದು
4. ಸಂಸ್ಥೆಗೆ ಪ್ರೇರೆಪಣೆ ಕೊಡುವುದು ಮತ್ತು ಜಿಲ್ಲೆಯಲ್ಲಿರುವ ರೈತ ಆಸಕ್ತಿ ಗುಂಪುಗಳ ಮತ್ತು ರೈತ ಸಂಸ್ಥೆಗಳ ಅಭಿವೃದ್ಧಿ ಪಡಿಸುವುದು.
5. ರೈತರಿಗೆ ಬೇಕಾದ ಪರಿಕರಗಳ ವಿರತಣೆ, ತಂತ್ರಜ್ಞಾನ ಬೆಂಬಲ, ಕೃಷಿ ಸಂಸ್ಕರಣೆ ಮತ್ತು ಮಾರುಕಟ್ಟೆ ವ್ಯವಸ್ಥೆ ದೊರಕಿಸುವಲ್ಲಿ ಖಾಸಗಿ ಮಂಡಳಿ ಮತ್ತು ಸಂಸ್ಥೆಗಳ ಹೆಚ್ಚಿನ ಸಮಾವೇಶಗೊಳಿಸಲು ಉತ್ತೇಜಿಸುವುದು.

6. ಸಂಪನ್ಮೂಲ ಕೊರತೆಯಿರುವವರ ಮತ್ತು ಅತೀ ಸಣ್ಣ ರೈತರು, ಅದರಲ್ಲೂ ಪರಿಶಿಷ್ಟ ಜಾತಿ, ಪ. ಪಂಗಡ ಮತ್ತು ರೈತ ಮಹಿಳೆಯರಿಗೆ ಹೆಚ್ಚಿನ ಸಾಲ ವ್ಯವಸ್ಥೆ ದೊರಕಿಸುವಲ್ಲಿ ಹಣಕಾಸು ಸಂಸ್ಥೆಗಳನ್ನು ಪ್ರೋತ್ಸಾಹಿಸುವುದು.
7. ಆಯಾ ಸಂಶೋಧನಾ ï ವಿಸ್ತರಣಾ ಕಾರ್ಯಕ್ರಮಗಳಿಗೆ ಬೇಕಾದ ಪ್ರಕ್ರಿಯೆ ಮತ್ತು ಪರಿಕರಗಳ ಪೂರೈಕೆಗಾಗಿ ರೈತ ಸಲಹಾ ಸಮಿತಿ ರಚಿಸಲು ಅಭಿವೃದ್ಧಿ ಇಲಾಖೆಗಳ ಜೊತೆಗೆ ಕೃಷಿ ವಿಜ್ಞಾನ ಕೇಂದ್ರ ಮತ್ತು ಕೃಷಿ ವಲಯ ಸಂಶೋಧನಾ ಕೇಂದ್ರಗಳನ್ನು ಪ್ರೋತ್ಸಾಹಿಸುವುದು.
8. ಜಿಲ್ಲೆಯಲ್ಲಿನ ಕೃಷಿ ಅಭಿವೃದ್ಧಿ ಚಟುವಟಿಕೆಗಳನ್ನು ಬೆಂಬಲಿಸಲು ಮತ್ತು ಪ್ರೋತ್ಸಾಹಿಸಲು ಸಹಕಾರಿಯಾಗುವಂತಹ ಒಪ್ಪಂದ ಮತ್ತು ಕರಾರುಗಳನ್ನು ಮಾಡಿಕೊಳ್ಳುವುದು.
9. ಅತ್ಮ ಯೋಜನೆ ಮತ್ತು ಅದರ ಭಾಗೀದಾರ ವಿಭಾಗಗಳ ಆರ್ಥಿಕ ಸ್ವಾವಲಂಬಿನೆಗಾಗಿ ಹಣಕಾಸು ಸಂಗ್ರಹಿಸಲು ಇತರೆ ಮೂಲಗಳನ್ನು ಗುರುತಿಸುವುದು.
10. ಕೃಷಿ ಮತ್ತು ಸಹಕಾರ ನಿರ್ದೇಶನಾಲಯದ ವಿವಿಧ ಯೋಜನೆ ಮತ್ತು ಕಾರ್ಯಕ್ರಮಗಳಡಿಯಲ್ಲಿ ವಿಸ್ತರಣಾ ಕಾರ್ಯಕ್ಕೆ ಲಭ್ಯವಿರುವ ಮಾನವ ಸಂಪನ್ಮೂಲ ಮತ್ತು ಹಣಕಾಸು ವ್ಯವಸ್ಥೆಯನ್ನು ಕೂಡಿಸುವುದು.
11. ಪ್ರತಿಯೊಂದು ಭಾಗೀದಾರ ಇಲಾಖೆಗಳಲ್ಲಿ ಆವರ್ತನಿಧಿ ಪ್ರಾರಂಭಿಸುವುದು ಮತ್ತು ಅವುಗಳಿಂದ ತಂತ್ರಜ್ಞಾನ ಸೇವೆಗಳಂತಹ ಕೃತಕ ಗರ್ಭಧಾರಣೆ ಅಥವಾ ಮಣ್ಣು ಪರೀಕ್ಷೆ ಇತ್ಯಾದಿಗಳ ಖರ್ಚು ಭರಿಸುವುರೊಂದಿಗೆ ಹಂತ ಹಂತವಾಗಿ ಸಂಪೂರ್ಣ ವೆಚ್ಚ ಮುಕ್ತತೆ ಹೊಂದುವೆಡೆಗೆ ಪ್ರೋತ್ಸಾಹಿಸುವುದು.
12. ಅತ್ಮ ಸಂಸ್ಥೆಯ ಹಣಕಾಸು ಲೆಕ್ಕಗಳ ನಿಯತಕಾಲಿಕ ಲೆಕ್ಕ ಪರೀಕ್ಷೆಗೆ ವ್ಯವಸ್ಥೆ ಮಾಡುವುದು
13. ಅತ್ಮ ಸಂಸ್ಥೆಗೆ ಬೇಕಾದ ಕಾಯ್ದೆ ಕಾನೂನುಗಳ ಅಳವಡಿಕೆ ಮತ್ತು ತಿದ್ದುಪಡಿ ಮಾಡುವುದು
14. ಅತ್ಮ ಚಾಲನಾ ಸಮಿತಿಯ ಸಭೆಯನ್ನು ಪ್ರತಿ ಮೂರು ತಿಂಗಳಿಗೊಮ್ಮೆ ಅಥವಾ ಪದೇ ಪದೇ ನಡೆಸುವುದು.
15. ಅತ್ಮ ಸಮಿತಿಯ ಸಮಗ್ರ ಕಾರ್ಯನಿರ್ವಹಣೆಗೆ ಬೇಕಾದ ಇನ್ನಿತರೆ ಕಾರ್ಯ ಕೈಗೊಳ್ಳುವುದು.

ಅನುಬಂಧ – I (ಈ)

# ತಾಲೂಕು ಮಟ್ಟದ ಅನುಷ್ಠಾನ ಸಮಿತಿ (TIC)

ಇದು ತಾಲೂಕು ಮಟ್ಟದಲ್ಲಿ ಕೃಷಿ ಹಾಗೂ ಕೃಷಿ ಸಂಬಂಧಿತ ಇಲಾಖೆಗಳ ಒಡಗೂಡಿ ಕೆಲಸ ಮಾಡುವ ಒಂದು ಸಮಿತಿ. ಇದರ ರಚನೆ ಕೆಳಗಿನಂತಿದೆ.

| | | |
|---|---|---|
| 1 | ತಾಲ್ಲೂಕ ಸಹಾಯಕ ಕೃಷಿ ನಿರ್ದೇಶಕರು | ಅಧ್ಯಕ್ಷರು |
| 2 | ತಾಲ್ಲೂಕ ಮಟ್ಟದ ಅಧಿಕಾರಿಗಳು, ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ಮೀನುಗಾರಿಕೆ, ಮಣ್ಣು ಸಂರಕ್ಷಣೆ, ರೇಷ್ಮೆ ಇತ್ಯಾದಿ | ಸದಸ್ಯರುಗಳು |
| 3 | ಕೃಷಿ ವಿಜ್ಞಾನ ಕೇಂದ್ರದ ಪದನಾಮಾಂಕಿತ ವಿಜ್ಞಾನಿ | ಸದಸ್ಯರು |
| 4 | ತಾಲ್ಲೂಕ ತಂತ್ರಜ್ಞಾನ ವ್ಯವಸ್ಥಾಪಕರು | ಸದಸ್ಯ ಕಾರ್ಯದರ್ಶಿ |

* ಈ ಹಿಂದಿನಂತೆ ಸಹಾಯಕ ಕೃಷಿ ನಿರ್ದೇಶಕರು ಅನುದಾನದ ನಿರ್ವಹಣೆ ನಿರ್ವಹಿಸುತ್ತಾರೆ.

ಅನುಬಂಧ – I (ಉ)

## ತಾಲೂಕು, ಜಿಲ್ಲೆ ಹಾಗೂ ರಾಜ್ಯ ಮಟ್ಟದಲ್ಲಿ ï ರೈತ ಸಲಹಾ ಸಮಿತಿಗಳು

**I ತಾಲೂಕು ರೈತರ ಸಲಹಾ ಸಮಿತಿ (BFAC)** ಯಲ್ಲಿ ಪ್ರತಿ ತಾಲೂಕಿನಲ್ಲಿ 20-25 ಬೇರೆ ಬೇರೆ ಪಂಗಡದ ರೈತರು, ರೈತ ಮಹಿಳೆಯರು ಹಾಗೂ ಸಮಾಜದ ದುರ್ಬಲ ವರ್ಗದವರು ತಾಲ್ಲೂಕಾ ರೈತ ಸಲಹಾ ಸಮಿತಿಯ ಸದಸ್ಯರಾಗಿರುತ್ತಾರೆ. ಈ ಸಲಹಾ ಸಮಿತಿಯ ರಚನೆ ಈ ಕೆಳಗಿನಂತಿದೆ.

### ರಚನೆ

| ಕ್ರಂ.ಸಂಖ್ಯೆ | ಸದಸ್ಯರು | ವೃತ್ತಿ |
|---|---|---|
| 1. | ರೈತರು (2) | ಕೃಷಿ |
| 2. | ರೈತ ಮಹಿಳೆ (2) | ಕೃಷಿ |
| 3. | ರೈತರು (2) | ತೋಟಗಾರಿಕೆ |
| 4. | ರೈತ ಮಹಿಳೆ (2) | ತೋಟಗಾರಿಕೆ |
| 5. | ರೈತರು (2) | ಪಶು ಸಂಪತ್ತು ಉತ್ಪಾದಕರು |
| 6. | ರೈತ ಮಹಿಳೆ (2) | ಪಶು ಸಂಪತ್ತು ಉತ್ಪಾದಕರು |
| 7. | ರೈತ ಮಹಿಳೆ (2) | ಮಹಿಳಾ ಮಂಡಳ |
| 8. | ರೈತರು (2) | ಯುವಕ ಮಂಡಳ |
| 9. | ರೈತರು (2) | ಕೃಷಿ ಪರಿಕರ ವ್ಯಾಪಾರಸ್ಥರು |
| 10 | ರೈತರು (2) | ರೈತರ ಗುಂಪುಗಳು |
| 11. | ರೈತರು (2) | ತಾಲ್ಲೂಕು ಅಭಿವೃದ್ಧಿ ಸಭೆ ಸದಸ್ಯರು |

### ಸೂಚನೆ

i. ಹೆಚ್ಚಿನ ನಾಲ್ಕು ಸದಸ್ಯರನ್ನು ರೈತ ಕುಟುಂಬಗಳಲ್ಲಿ ಕೃಷಿ ಸಂಬಂಧಿತ ಉದ್ಯೋಗಗಳಲ್ಲಿ ತೊಡಗಿರುವ ರೈತರನ್ನು ಸೇರಿಸಿಕೊಳ್ಳಬಹುದು

ii. ರೈತ ಸಲಹಾ ಸಮಿತಿಯ ಅಧಿಕಾರವಧಿ 2 ವರ್ಷ ಇರುತ್ತದೆ. ಇದಾದ ನಂತರ ಹೊಸ ರೈತರನ್ನು ರೈತ ಸಲಹಾ ಸಮಿತಿಯಲ್ಲಿ ಆಯ್ಕೆ ಮಾಡಲಾಗುತ್ತದೆ.

iii. ಪಾರದರ್ಶಕತೆ ಹಾಗೂ ಪ್ರಜಾಪ್ರಭುತ್ವ ಪದ್ದತಿಯಲ್ಲಿ ರೈತ ಸಲಹಾ ಸಮಿತಿಯಲ್ಲಿ ರೈತರನ್ನು ನೇಮಿಸುವಾಗ ರಾಜ್ಯಗಳು ತಮ್ಮದೇ ಆದ ಪದ್ದತಿಗಳನ್ನು ಜಾರಿಗೊಳಿಸಬಹುದು / ನಿರ್ಧರಿಸಬಹುದು. ಸಾಮಾಗ್ರಿ ಆಸಕ್ತ ಗುಂಪುಗಳ, ಆಸಕ್ತ ರೈತ ಗುಂಪುಗಳ, ಸ್ವ-ಸಹಾಯ ಗುಂಪುಗಳು ಮತ್ತು ಪ್ರಗತಿಪರ ರೈತರಿಗೆ ಹೆಚ್ಚು ಆದ್ಯತೆ ಕೊಡಲಾಗುವುದು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಸಣ್ಣ ರೈತರು, ಅತೀ ಸಣ್ಣ ರೈತರು ಹಾಗೂ ರೈತ ಮಹಿಳೆಯರನ್ನು ಈ ಸಮಿತಿಯು ಸಾಕಷ್ಟು ಪ್ರತಿನಿಧಿಸುವಂತಿರಬೇಕು.

iv. ಮೇಲೆ ಹೇಳಿದ ಸದಸ್ಯರಲ್ಲಿ ಸರದಿಯಂತೆ ಅಧ್ಯಕ್ಷರ ಸ್ಥಾನವನ್ನು ಆರಿಸಲಾಗುವುದು. ತಾಲ್ಲೂಕು ತಂತ್ರಜ್ಞಾನ ವ್ಯವಸ್ಥಾಪಕರು (BTM) ರು ತಾಲ್ಲೂಕು ರೈತರ ಸಲಹಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ.

II **ಜಿಲ್ಲಾ ರೈತರ ಸಲಹಾ ಸಮಿತಿಯ** 25 ರೈತರಿಗಿಂತ ಹೆಚ್ಚು ಸದಸ್ಯರನ್ನು ಹೊಂದಿರುವುದಿಲ್ಲ (ಜಿಲ್ಲೆಯಲ್ಲಿರುವ ತಾಲೂಕುಗಳ ಸಂಖ್ಯೆಯ ಮೇರೆಗೆ ಈ ಸದಸ್ಯರ ಸಂಖ್ಯೆ ನಿರ್ಧಾರವಾಗುತ್ತದೆ).

(i) ಬಹು ಸದಸ್ಯರ ಒಪ್ಪಿಗೆ ಮೇರೆಗೆ 1-2 ರೈತರನ್ನು BFAC ಒಮ್ಮತದಿಂದ ನೇಮಿಸಲಾಗುತ್ತದೆ.

(ii) ಜಿಲ್ಲಾ ಮಟ್ಟದಲ್ಲಿ ಪ್ರಶಸ್ತಿ ಪಡೆದ ರೈತರನ್ನು ಆರಿಸಲಾಗುತ್ತದೆ.

III **ರಾಜ್ಯ ಮಟ್ಟದ ರೈತರ ಸಲಹಾ ಸಮಿತಿಯು** 30 ರೈತರಿಗಿಂತ ಹೆಚ್ಚಿನ ಸದಸ್ಯರನ್ನು ಹೊಂದಿರುವದಿಲ್ಲ. (ರಾಜ್ಯದಲ್ಲಿರುವ ಜಿಲ್ಲೆಗಳ ಸಂಖ್ಯೆಗನುಗುಣವಾಗಿ ಸದಸ್ಯರ ಸಂಖ್ಯೆ ನಿರ್ಧಾರವಾಗುತ್ತದೆ)

(i) 1-2 ರೈತರು ಜಿಲ್ಲಾ ರೈತರ ಸಲಹಾ ಸಮಿತಿಯಿಂದ ನೇಮಿಸುತ್ತಾರೆ

(ii) ರಾಜ್ಯ ಮಟ್ಟದಲ್ಲಿ ಪ್ರಶಸ್ತಿ ಪಡೆದ ರೈತರನ್ನು ಆರಿಸಲಾಗುತ್ತದೆ

## ರೈತ ಸಲಹಾ ಸಮಿತಿಯ ಮುಖ್ಯ ಕಾರ್ಯಚಟುವಟಿಕೆಗಳು:

- ರೈತರ ಮರು ಮಾಹಿತಿ ಮತ್ತು ಪರಿಕರಗಳ ತಯಾರಿಕೆ / ಕ್ರೋಢೀಕರಣಗಳ ಆಧಾರದ ಮೇರೆಗೆ ಆದ್ಯತೆ ಕೊಟ್ಟು ಕಾರ್ಯಸೂಚಿಗಳನ್ನು ತಯಾರಿಸುವ ಕಾರ್ಯನಿರ್ವಾಹಕ ಸಮಿತಿಗಳು ಈ ಕೆಳಗಿನಂತಿವೆ.

(i) ತಾಲೂಕಾ ರೈತ ಸಲಹಾ ಸಮಿತಿ (BFAC) ಗೆ ತಾಲೂಕಾ ಅನುಷ್ಠಾನ ಸಮಿತಿ (TIC)

(ii) ಜಿಲ್ಲಾ ರೈತ ಸಲಹಾ ಸಮಿತಿ (DFAC) ಗೆ ಅತ್ಮ ಚಾಲನಾ ಸಮಿತಿ (ATMA GB) (ನೇಮಿಸಿದ ಪ್ರತಿನಿಧಿಗಳ ಮುಖಾಂತರ)

(iii) ರಾಜ್ಯ ರೈತ ಸಲಹಾ ಸಮಿತಿ (SFAC) ಗೆ ಸಮೇತಿ (SAMETI) ಗಳ ಅವಶ್ಯಕತೆಗಳ ಆಧಾರದ ಮೇರೆಗೆ ತರಬೇತಿ ಹಾಗೂ ರಾಜ್ಯ ನೊಡಲ್ ಸಮಿತಿಯಿಂದ ಅಂತಿಮವಾಗಿ ಅನುಮತಿ ಪಡೆದ ರಾಜ್ಯ ವಿಸ್ತರಣಾ ಕಾರ್ಯ ಯೋಜನೆಗಳು (ನೇಮಿಸಿದ ಪ್ರತಿನಿದಿಗಳ ಮುಖಾಂತರ) ನಿಯೋಜಿಸಲಾಗುವುದು.

**ಟಿಪ್ಪಣಿ:**

ಈ ಎಲ್ಲ ಮೇಲ್ಕಾಣಿಸಿದ ಸಲಹಾ ಸಮಿತಿಗಳಿಂದ ನಿಗದಿತ ವೇಳೆಯಲ್ಲಿ ಮಾಹಿತಿ ಕಳುಹಿಸದಿದ್ದಾಗ ಆಡಳಿತ ಮಂಡಳಿಯವರು ತಡಮಾಡದೇ ನಿರ್ಧಾರವನ್ನು ಕೈಗೊಳ್ಳುವ ಅಧಿಕಾರವನ್ನು ಹೊಂದಿದ್ದಾರೆ. ಈ ಸಲಹಾ ಸಮಿತಿಗಳು ಅನುಕೂಲಕರ ವೈಜ್ಞಾನಿಕ ಹಾಗೂ ಹಣಕಾಸಿನ ಆಧಾರದ ಮೇರೆಗೆ ಸೂಕ್ತ ಸಲಹೆ ಸೂಚನೆಗಳನ್ನು ನೀಡಿದಾಗ ಆಡಳಿತ ಮಂಡಳಿಯು ಅವುಗಳನ್ನು ಪರಿಗಣಿಸುತ್ತದೆ.

- **ರೈತ ಸಲಹಾ ಸಮಿತಿಗಳು ಈ ಕೆಳ ಕಾಣಿಸಿದ ಹಂತಗಳಲ್ಲಿ ಭೇಟಿಯಾಗುವರು:**

    (i) ತಾಲ್ಲೂಕಾ ರೈತ ಸಲಹಾ ಸಮಿತಿ (BFAC) : ಬೆಳೆ ಹಂಗಾಮಿನಲ್ಲಿ ತಿಂಗಳಿಗೊಮ್ಮೆ ಮತ್ತು ಹಂಗಾಮು ರಹಿತ ದಿನಗಳಲ್ಲಿ ತ್ರೈಮಾಸಿಕವಾಗಿ ಭೇಟಿ ಮಾಡುವುದು

    (ii) ಜಿಲ್ಲಾ ರೈತ ಸಲಹಾ ಸಮಿತಿ (DFAC) : ತ್ರೈಮಾಸಿಕವಾಗಿ ಅತ್ಮ ಚಾಲನಾ ಸಮಿತಿಯ ಸಭೆಯ ಮುಂಚಿತವಾಗಿ ಭೇಟಿ ಮಾಡುವದು.

    (iii) ರಾಜ್ಯ ರೈತ ಸಲಹಾ ಸಮಿತಿ (SFAC) : ತ್ರೈಮಾಸಿಕ ಭೇಟಿ ಮಾಡುವದು.

- ತಾಲ್ಲೂಕ ಹಾಗೂ ಗ್ರಾಮ ಮಟ್ಟದಲ್ಲಿ ಆಸಕ್ತ ರೈತ ಗುಂಪುಗಳನ್ನು ರಚನೆ ಮಾಡಿ ಅವುಗಳನ್ನು ವೃದ್ದಿ ಪಡಿಸುವುದು..

## ಆತ್ಮ ಕ್ಯಾಫಿಟೇರಿಯಾ, 2010 ಅನುಬಂಧ – II (ಇ)

# ಕ್ಷೇತ್ರ ಪಾಠಶಾಲೆಯ ಪರಿಕಲ್ಪನೆ

**ಆತ್ಮ ಯೋಜನೆಯಡಿಯಲ್ಲಿ ಕ್ಷೇತ್ರ ಪಾಠಶಾಲೆಯ ಅಭಿವೃದ್ಧಿಗೊಳಿಸುವ ಮುಖ್ಯ ಲಕ್ಷಣಗಳು ಈ ಕೆಳಗಿನಂತಿವೆ:**

1. ತಾಲೂಕು ಹಾಗೂ ಗ್ರಾಮ ಪಂಚಾಯತ ಮಟ್ಟದಲ್ಲಿ ಪಾಠಶಾಲೆಯನ್ನು ಕಾರ್ಯಗತಗೊಳಿಸುವುದು

2. ಈ ಕ್ಷೇತ್ರ ಪಾಠಶಾಲೆಗಳನ್ನು ಕೃಷಿಯಲ್ಲಿ ಅತ್ಯುತ್ತಮ ಸಾಧನೆಗೈದ ಪ್ರಗತಿಪರ ರೈತನ ಹೊಲಗಳಲ್ಲಿ ಸ್ಥಾಪಿಸುವುದು. ತಾಲೂಕ ಮಟ್ಟದಲ್ಲಿ ಇರುವ ವಿವಿಧ ಇಲಾಖೆಯ ತಾಲ್ಲೂಕಾ ಸಲಹಾ ಸಮಿತಿ ಹಾಗೂ ತಾಲೂಕಾ ಮಟ್ಟದ ಅನುಷ್ಠಾನ ಸಮಿತಿಗಳೆರಡು ಒಟ್ಟುಗೂಡಿ ಸಾಮರ್ಥ್ಯವುಳ್ಳ ರೈತರ ಪಟ್ಟಿಯನ್ನು ಮಾಡಿ ಕ್ಷೇತ್ರ ಪಾಠಶಾಲೆಗಳನ್ನು ಸಂಘಟಿಸಲು ಪಂಚಾಯತ್ ರಾಜ್ ಸಮಿತಿ ಮೂಲಕ (ತಾಲೂಕಾ ಮಟ್ಟದ ಪಂಚಾಯತ್ ರಾಜ್ ಸಂಸ್ಥೆಗಳ ಚುನಾಯಿತ ಮಂಡಳಿಗಳು) ಅತ್ಮ ಚಾಲನಾ ಸಮಿತಿಗೆ ಸಲ್ಲಿಸಲಾಗುವುದು. "ಕ್ಷೇತ್ರ ಪಾಠಶಾಲೆ"ಗಳು ಹಾಗೂ "ಕ್ಷೇತ್ರ ಪಾಠಶಾಲೆಯ ತರಬೇತುದಾರ"ರನ್ನು ಜಿಲ್ಲಾ ಅತ್ಮ ಚಾಲನಾ ಸಮಿತಿಯು ಒಪ್ಪಿಗೆ ನೀಡುವುದು

3. ಪ್ರಗತಿಪರ ರೈತರು, ವಿಸ್ತರಣಾ ಕಾರ್ಯಕರ್ತರು ಅಥವಾ ಪರಿಣಿತ ಸರ್ಕಾರಿ ಅಥವಾ ಸರ್ಕಾರೇತರ ಸಂಸ್ಥೆಗಳ ಪರಿಣಿತರನ್ನು ಕ್ಷೇತ್ರಪಾಠಶಾಲೆಯ ಶಿಕ್ಷಕರೆಂದು ಪರಿಗಣಿಸುವುದು.

4. ಮಂಚೂಣಿ ಪ್ರಾತ್ಯಕ್ಷಿಕೆಗಳನ್ನು ಒಂದು ಅಥವಾ ಒಂದಕ್ಕಿಂತ ಹೆಚ್ಚು ಬೆಳೆಗಳು ಅಥವಾ ಕೃಷಿಯೇತರ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು ಕ್ಷೇತ್ರ ಪಾಠಶಾಲೆಯ ಮುಖ್ಯ ಚಟುವಟಿಕೆಗಳಲ್ಲಿ ಒಂದಾಗಿದೆ. ಈ ಮಂಚೂಣಿ ಪ್ರಾತ್ಯಕ್ಷಿಕೆಗಳು ಸಮಗ್ರ ಬೆಳೆ ನಿರ್ವಹಣೆ, ಭೂಮಿ ಹದಗೊಳಿಸುವುದು, ಬೀಜೋಪಚಾರ, ಸಮಗ್ರ ಕೀಟ ನಿರ್ವಹಣೆ, ಸಮಗ್ರ ಪೋಷಕಾಂಶಗಳ ನಿರ್ವಹಣೆ ಮುಂತಾದವುಗಳ ಬಗ್ಗೆ ಕೇಂದ್ರಿಕೃತವಾಗಿದೆ.

5. ಕ್ಷೇತ್ರ ಪಾಠಶಾಲೆಗಳು ಋತುಮಾನ ಪರ್ಯಂತ ತಾಂತ್ರಿಕ ಮಾಹಿತಿ/ ತರಬೇತಿಗಳನ್ನು ಫಲಾನುಭವಿಗಳಿಗೆ ಬೆಂಬಲ ನೀಡಿ ಬೆಳೆ ಹಂಗಾಮಿನಲ್ಲಿ ಪ್ರತಿ ಆರು ಆಪತ್ತಿನ ಸ್ಥಿತಿಯಲ್ಲಿ ಕನಿಷ್ಟ ಒಂದಾದರು ಚರ್ಚಾ ಕೂಟವನ್ನು ಏರ್ಪಡಿಸುವುದು.

6. ತರಬೇತಿ ಅಭ್ಯರ್ಥಿಗಳನ್ನು ಆಯ್ಕೆಮಾಡುವಾಗ ಶೇ.೫೦ರಷ್ಟು ಸಣ್ಣ ಹಾಗೂ ಅತೀ ಸಣ್ಣ ರೈತರನ್ನು ಪ್ರತಿನಿಧಿಸುವಂತಿರಬೇಕು. ಆಸಕ್ತಿ ಬೆಳೆಗಾರರ ಗುಂಪು/ ಆಸಕ್ತ ರೈತರ ಗುಂಪಿಗೆ ಆದ್ಯತೆ ನೀಡಬೇಕು.

7. ಅವಶ್ಯಕತೆಗಳಿಗನುಗುಣವಾಗಿ ಅಥವಾ ನಿಗದಿಪಡಿಸಿದ ದಿನದಂತೆ ವಿದ್ಯಾರ್ಥಿಗಳು ಕ್ಷೇತ್ರಪಾಠಶಾಲೆಗೆ ಭೇಟಿ ನೀಡುತ್ತಾರೆ, ಅವಶ್ಯವೆನಿಸಿದಲ್ಲಿ ಶಿಕ್ಷಕರು ವಿದ್ಯಾರ್ಥಿಗಳನ್ನು ಭೇಟಿ ಮಾಡಬಹುದು.

8. ಶಿಕ್ಷಕರ ಜ್ಞಾನ ಮತ್ತು ಕೌಶಲ್ಯಗಳನ್ನು ವೃದ್ಧಿಸಲು ಜಿಲ್ಲಾ /ರಾಜ್ಯ /ರಾಷ್ಟ್ರೀಯ ಮಟ್ಟದಲ್ಲಿ ಸತತವಾಗಿ ತರಬೇತಿ ಅಥವಾ ಕ್ಷೇತ್ರ ದರ್ಶನಗಳನ್ನು ಹಮ್ಮಿಕೊಳ್ಳುವುದು.

9. ಕ್ಷೇತ್ರ ಪಾಠಶಾಲೆಗಳಿಂದ ತಾಂತ್ರಿಕ ಬೆಂಬಲ ನೀಡುವುದಲ್ಲದೆ ವಿದ್ಯಾರ್ಥಿಗಳಿಗೆ ಸಹ ಜ್ಞಾನ ಮತ್ತು ಕೌಶಲ್ಯ ವೃದ್ಧಿಸಲು ಜಿಲ್ಲೆ/ ರಾಜ್ಯ ಮಟ್ಟದಲ್ಲಿ ತರಬೇತಿ ಹಾಗೂ ಕ್ಷೇತ್ರ ದರ್ಶನಗಳನ್ನು ಏರ್ಪಡಿಸುವುದು. ವಿದ್ಯಾರ್ಥಿಗಳು ತಮ್ಮ ಹಾಗೂ ನೆರೆ ಹಳ್ಳಿಗಳಲ್ಲಿ ವಿಸ್ತರಣಾ ಮಾಹಿತಿಯನ್ನು ನೀಡುವಲ್ಲಿ ಜವಾಬ್ದಾರಿ ಆಗಿರುತ್ತಾರೆ (Appendix ï I above)

10. ಪ್ರಗತಿಪರ ರೈತರಿಗೆ ಅನುಬಂಧ 1 ರಲ್ಲಿ ಸೂಚಿಸಿದಂತೆ 1-5 ವಿಷಯಗಳಿಗಾಗಿ ಖರ್ಚು ಮಾಡಿದ ವೆಚ್ಚದಲ್ಲಿ ಗರಿಷ್ಟ ಶೇ.10 ರಷ್ಟನ್ನು ನೀಡುವುದು.

11. ಪ್ರಗತಿಪರ ರೈತರು ಕ್ಷೇತ್ರ ಪಾಠಶಾಲೆಗಳನ್ನು ಪ್ರಾರಂಭಿಸುವಾಗ ತಾಂತ್ರಿಕ ಸಲಹೆಗಾಗಿ ಕೃಷಿ ವಿಜ್ಞಾನ ಕೇಂದ್ರ ಮತ್ತು ವಿಸ್ತರಣಾ ಕಾರ್ಯಕರ್ತರಿಂದ ನಿರ್ದಿಷ್ಟ ಬೇಸಾಯ ಕ್ರಮಗಳ ವೈಜ್ಞಾನಿಕ ವಿಶ್ಲೇಷಣೆ ವಿವರಿಸಲು ವಿಜ್ಞಾನಿಗಳ ಸಲಹೆ ಪಡೆಯಬಹುದು.

12. ಕ್ಷೇತ್ರ ಪಾಠಶಾಲೆಯ ನಿರ್ಧಿಷ್ಟ ಚಟುವಟಿಕೆಗಳ ನಿಯಮಾವಳಿಗಳ ಪ್ರಕಾರ ತರಬೇತಿ ಅಥವಾ ಕ್ಷೇತ್ರ ದರ್ಶನವನ್ನು 5 ರಿಂದ 6 ದಿನಗಳ ವರೆಗೆ ಪ್ರಗತಿಪರ ರೈತರು/ ಸಾಧನೆಗೈದ ರೈತರಿಗೆ ಬೆಂಬಲ ನೀಡುವುದು.

13. ತರಬೇತಿ ಅಭ್ಯರ್ಥಿಗಳು ಪ್ರಯಾಣದ ವೆಚ್ಚವನ್ನು ತಾವೇ ಭರಿಸಬೇಕು ಇದರಿಂದ ಫಲಾನುಭವಿಗಳ ಚಟುವಟಿಕೆಗಳಿಗೆ ವಂತಿಕೆ ಒದಗಿಸಲಾಗುವುದು. ತಾಲೂಕಾ ತಾಂತ್ರಿಕ ಮ್ಯಾನೆಜರ್ ಕ್ಷೇತ್ರ ಪಾಠಶಾಲೆಯ ಸಂಯೋಜಕರಾಗಿ ಹಂತ ಹಂತವಾಗಿ ಚಟುವಟಿಕೆಯ ಮೇಲ್ವಿಚಾರಣೆ ಮಾಡುವುದು. (ಪ್ರತಿಯೊಂದು ಬೆಳೆ ಆಪತ್ತಿನಲ್ಲಿ ಕನಿಷ್ಟ ಒಂದು ಸಲ ಭೇಟಿ ಮಾಡಿ ಮೇಲ್ವಿಚಾರಣೆ ಹಾಗೂ ನಿಯಮಿತ ಕಾರ್ಯಗಳನ್ನು ದಾಖಲಾತಿ ಮಾಡುವುದು). ಸಂಯೋಜಕರು ಜಿಲ್ಲಾ ಮಟ್ಟದಲ್ಲಿ ಕ್ಷೇತ್ರ ಪಾಠಶಾಲೆಯ ಪ್ರಗತಿಪರ ರೈತರ ಮಧ್ಯ ಹಾಗೂ ಕೃಷಿ ವಿಜ್ಞಾನ ಕೇಂದ್ರ ಮತ್ತು ತಾಲೂಕಾ ಅನುಷ್ಠಾನ ಸಮಿತಿಯೊಂದಿಗೆ ಚರ್ಚಾ ಕೂಟವನ್ನು ಕನಿಷ್ಠ ತ್ರೈಮಾಸಿಕಕ್ಕೊಮ್ಮೆಯಾದರು ಏರ್ಪಡಿಸಬೇಕು.

14. ತಾಲೂಕಾ ಮಟ್ಟದ ಅನುಷ್ಠಾನ ಸಮಿತಿಯು ಹಾಗೂ ರೈತ ಸಲಹಾ ಸಮಿತಿಗಳು ವರ್ಷಕ್ಕೇರಡು ಸಲ ಮತ್ತು ಆತ್ಮ ಚಾಲನಾ ಸಮಿತಿಯು ವರ್ಷಕ್ಕೊಂದು ಸಲ ಪ್ರತಿ ತಾಲ್ಲೂಕುಗಳಲ್ಲಿರುವ ಎಲ್ಲ ಕ್ಷೇತ್ರ ಪಾಠಶಾಲೆಗಳ ಪರಿಣಾಮಕಾರಿ ನಿರ್ವಹಣೆಗಾಗಿ ಪುನರಾವಲೋಕನ ಮಾಡಬೇಕು.

15. ಹೆಚ್ಚು ಯಶಸ್ವಿಕಂಡಿರುವ ಕ್ಷೇತ್ರ ಪಾಠಶಾಲೆಗಳ ಸೂಕ್ತವಾದ ಕಾರಣಗಳನ್ನು ಲಿಖಿತವಾಗಿ ದಾಖಲಿಸಿ ಇನ್ನು ಒಂದು ಅಥವಾ ಎರಡು ಹಂಗಾಮುಗಳವರೆಗೆ ಕೇವಲ ಚಾಲನಾ ವೆಚ್ಚಗಳೊಂದಿಗೆ ಮುಂದುವರೆಸುವದು. ಹೀಗೆ ಮುಂದುವರೆಸಿದಾಗ ಅಭ್ಯರ್ಥಿಗಳನ್ನು ಹಿಂದಿನ ಕ್ಷೇತ್ರ ಪಾಠಶಾಲೆಗಳಲ್ಲಿ ಪಾಲ್ಗೊಳ್ಳದ ತಾಲೂಕ/ಗ್ರಾಮ ಪಂಚಾಯತಿಗಳಿಂದ ಆಯ್ಕೆ ಮಾಡಬೇಕು.

16. ರಾಜ್ಯಗಳು ಶ್ರೇಷ್ಠ ಕ್ಷೇತ್ರ ಪಾಠಶಾಲೆಗಳನ್ನು ಪುರಸ್ಕರಿಸಲು ಜಿಲ್ಲೆ/ರಾಜ್ಯಮಟ್ಟದಲ್ಲಿ ಆಯ್ಕೆ ಮಾಡಬಹುದು.

17. ಕ್ಷೇತ್ರ ಪಾಠಶಾಲೆಗಳಲ್ಲಿ ತರಬೇತಿಗಳು ಹೊಂದಿಕೊಳ್ಳುವಂತಿರಬೇಕು ಮತ್ತು ತರಗತಿಗಳಿಗೆ ಮೀಸಲಾಗಿರದೆ ಕಾರ್ಯಾನುಭವ ಹೆಚ್ಚಿಸುವಂತಿರಬೇಕು. ಮಾಹಿತಿಗಳ ವಿಶ್ಲೇಶಣೆ ಹಾಗೂ ಚರ್ಚೆಗಳಿಗೆ ಆದ್ಯತೆಹೊಂದಿರಬೇಕು.

## 2005–06ನೇ ಸಾಲಿನಿಂದ ಕರ್ನಾಟಕ ರಾಜ್ಯದಲ್ಲಿ ಆತ್ಮ ಯೋಜನೆಯಡಿ ವರ್ಷವಾರು ಬಿಡುಗಡೆಯಾದ ಅನುದಾನ ಹಾಗೂ ವೆಚ್ಚದ ವಿವರಗಳು

| ವರ್ಷ | ರಾಜ್ಯ ವಿಸ್ತರಣಾ ಕ್ರಿಯಾ ಯೋಜನೆ | ಭಾರತ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ | ಪ್ರಾರಂಭಿಕ ಶುಲ್ಕ | ಬಿಡುಗಡೆಯಾದ ಅನುದಾನ | | ವೆಚ್ಚ |
|---|---|---|---|---|---|---|
| | | | | ಭಾರತ ಸರ್ಕಾರದ (ಶೇ. 90ರ ಪಾಲು) | ರಾಜ್ಯ ಸರ್ಕಾರದ (ಶೇ. 10ರ ಪಾಲು) | |
| 2005–06 | 464.12 | 246.04 | – | 180.00 | – | – |
| 2006–07 | 1028.15 | 517.33 | 180.00 | 155.00 | – | 144.84 |
| 2007–08 | 1731.69 | 1217.15 | 190.16 | 339.00 | 74.88 | 141.21 |
| 2008–09 | 2952.64 | 1865.55 | 462.83 | 452.00 | 50.22 | 410.18 |
| 2009–10 | 2792.40 | 1857.80 | 554.87 | 250.00 | 27.78 | 692.45 |
| 2010–11 | 2613.31 | 1587.52 | 140.20 | 634.63 | 70.51 | 537.64 |
| 2011–12 | 3578.64 | 3424.76 | 381.97 | 1300.00 | 144.44 | 1254.97 |
| 2012–13 | 3001.66 | 2996.57 | 611.17 | 1417.57 | 137.45 | 1843.52 |
| **ಒಟ್ಟು** | **18162.61** | **13712.72** | **–** | **4728.20** | **505.28** | **5024.81** |

## 2013-14ನೇ ಸಾಲಿನ ಜಿಲ್ಲಾವಾರು ಕ್ರಿಯಾ ಯೋಜನೆ ವಿವರಗಳು

| ಕ್ರ.ಸಂ. | ಜಿಲ್ಲೆ | ಜಿಲ್ಲಾ ಕ್ರಿಯಾ ಯೋಜನೆ (ರೂ. ಲಕ್ಷಗಳಲ್ಲಿ) |
|---|---|---|
| 1 | ಬೆಂಗಳೂರು (ನಗರ) | 60.00 |
| 2 | ಬೆಂಗಳೂರು (ಗ್ರಾಮಾಂತರ) | 64.00 |
| 3 | ರಾಮನಗರ | 62.50 |
| 4 | ಕೋಲಾರ | 78.00 |
| 5 | ಚಿಕ್ಕಬಳ್ಳಾಪುರ | 85.00 |
| 6 | ತುಮಕೂರು | 120.00 |
| 7 | ಶಿವಮೊಗ್ಗ | 97.00 |
| 8 | ಚಿತ್ರದುರ್ಗ | 83.00 |
| 9 | ದಾವಣಗೆರೆ | 85.00 |
| 10 | ಮೈಸೂರು | 95.00 |
| 11 | ಚಾಮರಾಜನಗರ | 63.00 |
| 12 | ಮಂಡ್ಯ | 94.00 |
| 13 | ಕೊಡಗು | 55.00 |
| 14 | ಹಾಸನ | 106.00 |
| 15 | ಚಿಕ್ಕಮಗಳೂರು | 92.00 |
| 16 | ದಕ್ಷಿಣ ಕನ್ನಡ | 72.00 |
| 17 | ಉಡುಪಿ | 55.00 |
| 18 | ಧಾರವಾಡ | 76.00 |
| 19 | ಗದಗ | 75.75 |
| 20 | ಹಾವೇರಿ | 94.00 |
| 21 | ಉತ್ತರ ಕನ್ನಡ | 126.00 |
| 22 | ಬೆಳಗಾಂ | 120.00 |
| 23 | ಬಿಜಾಪುರ | 72.00 |
| 24 | ಬಾಗಲಕೋಟೆ | 80.00 |
| 25 | ರಾಯಚೂರು | 73.50 |
| 26 | ಕೊಪ್ಪಳ | 66.00 |
| 27 | ಬಳ್ಳಾರಿ | 90.00 |
| 28 | ಗುಲ್ಬರ್ಗಾ | 96.00 |
| 29 | ಬೀದರ್ | 70.00 |
| 30 | ಯಾದಗಿರಿ | 55.00 |
| 31 | ಜಿಲ್ಲಾ ಮಟ್ಟದ ಚಟುವಟಿಕೆಗಳು | 239.00 |
| | **ಒಟ್ಟು** | **2699.75** |

ಆತ್ಮ ಯೋಜನೆಯಡಿ 2013–14ನೇ ಸಾಲಿನಲ್ಲಿ ವಿವಿಧ ಜಿಲ್ಲೆಗಳಲ್ಲಿ ಲಭ್ಯವಿರುವ ಮತ್ತು ಉಪಯೋಗವಾಗಿರುವ ಅನುದಾನ ಜನವರಿ – 2014ರ ಅಂತ್ಯಕ್ಕೆ (ರೂ. ಲಕ್ಷಗಳಲ್ಲಿ)

| ಕ್ರ.ಸಂ | ಜಿಲ್ಲೆ | ಪ್ರಾರಂಭಿಕ ಅನುದಾನ (01.04.13) | ಬಿಡುಗಡೆಯಾದ ಅನುದಾನ | ಲಭ್ಯವಿರುವ ಅನುದಾನ | ಉಪಯೋಗಿತವಾದ ಅನುದಾನ (ಜನವರಿ–14 ಅಂತ್ಯಕ್ಕೆ) | ಬಾಕಿ ಅನುದಾನ |
|---|---|---|---|---|---|---|
| 1. | ಬೆಂಗಳೂರು (ನಗರ) | 5.78 | 32.22 | 38.00 | 30.98 | 7.02 |
| 2. | ಬೆಂಗಳೂರು (ಗ್ರಾ) | 13.00 | 27.22 | 40.22 | 37.17 | 3.05 |
| 3. | ರಾಮನಗರ | 8.48 | 26.22 | 34.70 | 26.65 | 8.05 |
| 4. | ಕೋಲಾರ | 3.35 | 34.03 | 37.38 | 39.26 | –1.88 |
| 5. | ಚಿಕ್ಕಬಳ್ಳಾಪುರ | 13.22 | 34.53 | 47.75 | 45.22 | 2.53 |
| 6. | ತುಮಕೂರು | 14.16 | 67.83 | 81.99 | 65.76 | 16.23 |
| 7. | ಶಿವಮೊಗ್ಗ | 2.26 | 52.72 | 54.98 | 47.35 | 7.63 |
| 8. | ಚಿತ್ರದುರ್ಗ | 11.42 | 40.96 | 52.38 | 45.87 | 6.51 |
| 9. | ದಾವಣಗೆರೆ | 1.97 | 44.27 | 46.24 | 44.31 | 1.93 |
| 10. | ಮೈಸೂರು | 9.71 | 52.94 | 62.65 | 58.00 | 4.65 |
| 11. | ಚಾಮರಾಜನಗರ | 12.12 | 23.22 | 35.34 | 32.42 | 2.92 |
| 12. | ಮಂಡ್ಯ | 12.17 | 47.64 | 59.81 | 40.94 | 18.87 |
| 13. | ಕೊಡಗು | 15.99 | 13.33 | 29.32 | 23.56 | 5.76 |
| 14. | ಹಾಸನ | 19.65 | 46.22 | 65.87 | 50.98 | 14.89 |
| 15. | ಚಿಕ್ಕಮಗಳೂರು | 15.64 | 26.83 | 42.47 | 40.66 | 1.81 |
| 16. | ದಕ್ಷಿಣ ಕನ್ನಡ | 32.16 | 34.25 | 66.41 | 40.30 | 26.11 |
| 17. | ಉಡುಪಿ | 12.98 | 16.28 | 29.26 | 31.28 | –2.02 |
| 18. | ಧಾರವಾಡ | 14.26 | 29.21 | 43.47 | 37.99 | 5.48 |
| 19. | ಗದಗ | 19.36 | 29.17 | 48.53 | 38.91 | 9.62 |
| 20. | ಹಾವೇರಿ | 11.19 | 47.64 | 58.83 | 49.1 | 9.73 |
| 21. | ಉತ್ತರ ಕನ್ನಡ | 14.47 | 68.37 | 82.84 | 64.32 | 18.52 |
| 22. | ಬೆಳಗಾವಿ | 10.56 | 58.06 | 68.62 | 58.23 | 10.39 |
| 23. | ಬಿಜಾಪುರ | 16.06 | 34.25 | 50.31 | 46.54 | 3.77 |
| 24. | ಬಾಗಲಕೋಟೆ | 4.64 | 40.83 | 45.47 | 44.15 | 1.32 |
| 25. | ರಾಯಚೂರು | 42.54 | 24.03 | 66.57 | 33.69 | 32.88 |
| 26. | ಕೊಪ್ಪಳ | 11.24 | 19.22 | 30.46 | 26.97 | 3.49 |
| 27. | ಬಳ್ಳಾರಿ | 6.64 | 47.64 | 54.28 | 50.88 | 3.40 |
| 28. | ಗುಲ್ಬರ್ಗಾ | 8.47 | 47.64 | 56.11 | 49.67 | 6.44 |
| 29. | ಬೀದರ್ | 5.77 | 34.03 | 39.80 | 32.02 | 7.78 |
| 30. | ಯಾದಗಿರಿ | 3.65 | 20.81 | 24.46 | 21.89 | 2.57 |
| 31. | ಸಮೇತಿ (ದ) | 7.08 | 37.84 | 44.92 | 25.03 | 19.89 |
| 32. | ಸಮೇತಿ (ಉ) | 17.28 | 32.00 | 49.28 | 28.62 | 20.66 |
| 33. | ಕೇಂದ್ರ ಕಛೇರಿ | 25.90 | 17.44 | 43.34 | 15.68 | 27.66 |
| | ಒಟ್ಟು | 423.17 | 1208.89 | 1632.06 | 1324.4 | 307.66 |

## ರಾಜ್ಯ ಮಟ್ಟದ ಆತ್ಮ ಯೋಜನೆಯ ರೈತರ ಸಲಹಾ ಸಮಿತಿಯ  ಸದಸ್ಯರ ವಿವರಗಳು

| ಕ್ರ. ಸಂ | ಜಿಲ್ಲೆ | ಸದಸ್ಯರ ಹೆಸರು | ಪೂರ್ಣ ವಿಳಾಸ |
|---|---|---|---|
| 1 | ಬೆಂಗಳೂರು(ನ) | ಶ್ರೀ ಸಿ. ನಾಗರಾಜು ಬಿನ್ ಚನ್ನಪ್ಪ | ಉತ್ತರಿ ಗ್ರಾಮ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು ಮೋ:9986952233 |
| 2 | ಬೆಂಗಳೂರು(ಗ್ರಾ) | ಶ್ರೀ ಬಸವರಾಜು ಬಿನ್ ಚನ್ನಪ್ಪ | ಚಿಕ್ಕರಾಯಪ್ಪನಹಳ್ಳಿ, ದೊಡ್ಡಬಳ್ಳಾಪುರ ತಾ. ಮೋ:9141597780 |
| 3 | ರಾಮನಗರ | ಶ್ರೀಮತಿ. ಸುಜಾತ ಕೋಂ. ಶಿವಲಿಂಗಯ್ಯ | ಎಂ. ಬೊಪಹಳ್ಳಿ, ಎಂ.ಜಿ. ಪಾಳ್ಯ ಪೋಸ್ಟ್, ರಾಮನಗರ ತಾ. ಮತ್ತು ಜಿಲ್ಲೆ. ಮೋ:9141836523 |
| 4 | ಕೋಲಾರ | ಶ್ರೀಮತಿ. ಪಾಪಮ್ಮ ಕೋಂ. ಪಾಪಣ್ಣ | ಡಿ. ಕುರುಬರಹಳ್ಳಿ, ಎಂ.ಎನ್. ಹಳ್ಳಿ ಗ್ರಾಮಪಂಚಾಯಿತಿ, ತಾಯಲೂರು ಹೋಬಳಿ, ಮುಳಬಾಗಿಲು ತಾಲ್ಲೂಕು, ಕೋಲಾರ ಜಿಲ್ಲೆ ಮೋ:9731219766 |
| 5 | ಚಿಕ್ಕಬಳ್ಳಾಪುರ | ಶ್ರೀ ಜಿ.ಎನ್. ರವಿಶಂಕರ್ | ಸಿಂಧೂ ಸೀಡ್ಸ್, ಗೌಡಗೆರೆ ಗ್ರಾಮ, ಗೌರಿ ಬಿದನೂರು ತಾ: ಚಿಕ್ಕಬಳ್ಳಾಪುರ ಜಿಲ್ಲೆ. ಮೋ:9900245485 |
| 6 | ತುಮಕೂರು | ಶ್ರೀ ಸಿ.ಎನ್. ತಿಮ್ಮೇಗೌಡ ಬಿನ್ ಸಿ.ಎಂ.ನಂಜೇಗೌಡ, | ಚೇಳೂರು, ಗುಬ್ಬಿ ತಾ: ತುಮಕೂರು ಜಿಲ್ಲೆ. ಮೋ:9481133756 |
| 7 | ಶಿವಮೊಗ್ಗ | ಶ್ರೀಮತಿ. ದುಮ್ಮಳ್ಳಿ ಶಿವಮ್ಮ ಕೋಂ. ಲೇಟ್ ಚೆನ್ನಬಸಪ್ಪ, | ದುಮಳ್ಳಿ ಗ್ರಾಮ, ನಿದಿಗೆ ಅಂಚೆ, ಶಿವಮೊಗ್ಗ ತಾ & ಜಿಲ್ಲೆ. ಮೋ:9880226998 |
| 8 | ಚಿತ್ರದುರ್ಗ | ಶ್ರೀ ಎಸ್.ಸಿ. ವೀರಭದ್ರಪ್ಪ ಬಿನ್ ಚನ್ನವೀರಪ್ಪ | ವಸುಂಧರ ಫಾರಂ, ಬಿ.ಜಿ. ಕೆರೆ (ಅಂಚೆ), ಮೊಳಕಾಲ್ಮೂರು (ತಾ॥) ಮೋ:9902088318 / 8762223145 |
| 9 | ದಾವಣಗೆರೆ | ಹೆಚ್.ಕೊಟ್ರೇಶ್ | ಅರಸೀಕೆರೆ ಗ್ರಾ, ಹರಪನಹಳ್ಳಿ ತಾ: ದಾವಣಗೆರೆ ಜಿಲ್ಲೆ. ಮೋ:9902232380 |
| 10 | ಮೈಸೂರು | ವೆಂಕಟೇಶ್ ಬಿನ್ ಚನ್ನೇಗೌಡ | ರಂಗಸಮುದ್ರ, ಟಿ.ನರಸೀಪುರ ತಾ: ಮೈಸೂರು ಜಿಲ್ಲೆ. ಮೋ:9964423245 |
| 11 | ಚಾ.ರಾ.ನಗರ | ಶ್ರೀ ಆರ್. ಜಯಸುಂದರ ನಾಯ್ಡು ಬಿನ್ ರಂಗಸ್ವಾಮಿ ನಾಯ್ಡು | ನಾಯ್ಡು ಸ್ಟ್ರೀಟ್, ಹನೂರು, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ ಮೋ:9449509442 |
| 12 | ಮಂಡ್ಯ | ಶ್ರೀ ಕೆ.ಸಿ. ಶಿವರಾಮೇಗೌಡ ಬಿನ್ ಎನ್.ಸಿ. ಚನ್ನೇಗೌಡ | ಕೀಲಾರ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ ಮೋ:9844084514 |
| 13 | ಕೊಡಗು | ಶ್ರೀ ಡಿ.ಎಸ್. ಧನಪಾಲ್ | ಬಸವನಹಳ್ಳಿ ಗ್ರಾಮ, ಗುಡ್ಡೆಹೊಸೂರು, ಸೋಮವಾರಪೇಟೆ ತಾ: ಕೊಡಗು ಜಿಲ್ಲೆ ಮೋ:96324687088 |

| | | | |
|---|---|---|---|
| | | | |
| 14 | ಹಾಸನ | ಶ್ರೀ ಬಿ. ಬಸವರಾಜು | ಸಂತೆಶಿವರ, ನುಗ್ಗೆಹಳ್ಳಿ ಹೋಬಳಿ, ಚನ್ನರಾಯಪಟ್ಟಣ ತಾ. ಮೋ:9482118587 |
| 15 | ಚಿಕ್ಕಮಗಳೂರು | K.H.ಕುಮಾರ ಸ್ವಾಮಿ ಬಿನ್ ಹಾಲಾರಾಧ್ಯ | ಕುನ್ನಾಳು, ಲಕ್ಕಮ್ಮನಹಳ್ಳಿ ಪೋಸ್ಟ್, ಲಕ್ಯಾ ಹೋಬಳಿ, ಚಿಕ್ಕಮಗಳೂರು ತಾಲ್ಲೂಕು & ಜಿಲ್ಲೆ ಮೋ:9480196333 |
| 16 | ದಕ್ಷಿಣ ಕನ್ನಡ | ಶ್ರೀ ಪ್ರಭಾಕರ ಮಯ್ಯ | ಸುರ್ಯಮನೆ, ನಡಗ್ರಾಮ, ಪೆರಮಾಣು ಅಂಚೆ, ಬೆಳ್ತಂಗಡಿ ತಾ: ದಕ್ಷಿಣ ಕನ್ನಡ ಜಿಲ್ಲೆ ಮೋ:9686329327 |
| 17 | ಉಡುಪಿ | ಕೆ.ಶಂಭುಶಂಕರ ರಾವ್ ತಂದೆ ಮಂಜುನಾಥಯ್ಯ | ಕಲ್ಲುದೇವಸ್ಥಾನ, ಹೆಗ್ಗುಂಜೆ ಗ್ರಾಮ, ಅಂಚೆ ಮಂದಾರ್ತಿ, ಉಡುಪಿ ತಾಲ್ಲೂಕು & ಜಿಲ್ಲೆ –576223 ಮೋ:9448308684 |
| 18 | ಧಾರವಾಡ | ವಿರೂಪಾಕ್ಷಪ್ಪ ವೀರಭದ್ರಪ್ಪ ಲಟ್ಟಿ | ಹೆಬ್ಬಾಳ, ನವಲಗುಂದ ತಾ: ಧಾರವಾಡ ಜಿಲ್ಲೆ. ಮೋ:9480569783 |
| 19 | ಗದಗ | ಶಿವಣ್ಣ ಅರಹುಣಸಿ | ಮಲ್ಲಾಪೂರ, ರೋಣ ತಾ: ಗದಗ ಜಿಲ್ಲೆ. ಮೋ:9902600504 |
| 20 | ಹಾವೇರಿ | ಶ್ರೀ ಮುತ್ತಣ್ಣ ಬೀರಪ್ಪ ಪೂಜಾರ | ಕಾಮನಹಳ್ಳಿ, ಪೋಸ್ಟ್ ಮಂತಗಿ, ಹಾನಗಲ್ ತಾಲ್ಲೂಕು, ಮೋ:9743155774 |
| 21 | ಉತ್ತರ ಕನ್ನಡ | ಶ್ರೀ ಜಿ.ವಿ. ಹೆಗಡೆ | ಪೋ.ಹುಳಗೋಳ, ಸಿರಸಿ ತಾ: ಉತ್ತರ ಕನ್ನಡ ಜಿಲ್ಲೆ ಮೋ:9449584710 |
| 22 | ಬೆಳಗಾವಿ | ಶ್ರೀ ಸುನೀಲ್ ತಾನಾಜಿ ಕುಲಕರ್ಣಿ | ಬೆಕ್ಕೇರಿ, ರಾಯಬಾಗ ತಾ: ಬೆಳಗಾವಿ ಜಿಲ್ಲೆ. ಮೋ:9449736294 |
| 23 | ಬಿಜಾಪುರ | ಶ್ರೀ ಸಂಜಯ ಬಿ. ಪಾಟೀಲ್ | ಪೋ.ಕನಮಡಿ, ಬಿಜಾಪುರ ತಾಲೂಕು & ಜಿಲ್ಲೆ ಪಿನ್ ಕೋಡ್–586138 ಮೋ:9945096061 |
| 24 | ಬಾಗಲಕೋಟೆ | ಶ್ರೀ ಮಹಾದೇವಪ್ಪ ರಾಮಪ್ಪ ಗೌರನ್ನವರ | ಸನಾಳ ಗ್ರಾಮ, ಜಮಖಂಡಿ ತಾ: ಬಾಗಲಕೋಟೆ ಜಿಲ್ಲೆ ಮೋ:9886985037 |
| 25 | ರಾಯಚೂರು | ಶ್ರೀ ಮರಿಸ್ವಾಮಿ ಎನ್ ಬಳ್ಳಾರಿ ತಂದೆ ನಾಗಯ್ಯ ಬಳ್ಳಾರಿ | ಯಕ್ಲಾಸಪುರ, ವಟಗಲ್ ಅಂಚೆ–584120, ಮಾನ್ವಿ ತಾ:, ರಾಯಚೂರು ಜಿಲ್ಲೆ ಮೋ:9448757982 |

| | | | |
|---|---|---|---|
| 26 | ಕೊಪ್ಪಳ | ಶ್ರೀ ಟಿ. ಅನೀಲ್ ಕುಮಾರ್ ತಂದೆ ಅರ್ಜುನ್ ಕುಮಾರ | ಬಸಾಪಟ್ಟಣ, ಗಂಗಾವತಿ ತಾ: ಕೊಪ್ಪಳ ಜಿಲ್ಲೆ. ಮೋ:9900440777 |
| 27 | ಬಳ್ಳಾರಿ | ಶ್ರೀ ಈರೋಜಪ್ಪ ಬಿನ್ ದೊಡ್ಡತಾಯಪ್ಪ | ಕೊಂಡನಾಯನಹಳ್ಳಿ, ಕಾಳಘಟ್ಟ, ಹೊಸಪೇಟೆ ತಾ. ಮೋ:7259758256 |
| 28 | ಗುಲ್ಬರ್ಗಾ | ಶ್ರೀ ಮಲ್ಲಿನಾಥ ಕೊಳ್ಳೂರ | ಮೇಳಕುಂದಾ(ಬಿ), ಗುಲ್ಬರ್ಗಾ ತಾಲ್ಲೂಕು ಮತ್ತು ಜಿಲ್ಲೆ ಮೋ:9945208188 |
| 29 | ಬೀದರ್ | ಗುರುಲಿಂಗಪ್ಪಾ ಬಿನ್ ಮಡೆಪ್ಪಾ ಮೇಲದೊಡ್ಡಿ | ಅಂಚೆ ಹುಡಗಿ, ತಾ. ಹುಮುನಾಬಾದ ಮೋ:9741333907 |
| 30 | ಯಾದಗಿರಿ | ಶ್ರೀ ಅಶೋಕ ಕುಮಾರ್ ಹನುಮಂತರಾವ್ ಕುಲಕರ್ಣಿ | ಮುದ್ದಬೂಲ್ ಅಂಚೆ, ಶಾಹಪೂರ ತಾ. ಮೋ:9845135359 |